# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಜೂನ್ 20, 2021

ಸಂಪುಟ : 48 ಸಂಚಿಕೆ : 37 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


## ತರಳಬಾಳು ಶ್ರೀಗಳು ಪ್ರಬುದ್ಧ ಚಿಂತಕರು

### ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರಪ್ಪ ಪ್ರಶಂಸೆ

ದಾವಣಗೆರೆ, ಜೂ.19- ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ನಾಡಿನ ಪ್ರಬುದ್ಧ ಚಿಂತಕರು, ಅಗ್ರಗಣ್ಯ ಸಂತರು. ಶ್ರೀಗಳು ಆರೋಗ್ಯ, ಪರಿಸರ, ನೆಲ, ಜಲದ ಬಗ್ಗೆ ಅಪಾರ ಕಾಳಜಿ ಹೊಂದಿದ್ದಾರೆಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಮುಕ್ತ ಕಂಠದಿಂದ ಪ್ರಶಂಸಿಸಿದರು.



ನಗರದ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಕಲ್ಯಾಣ ಮಂಟಪಕ್ಕೆ ಇಂದು ಬೆಳಿಗ್ಗೆ ಭೇಟಿ ನೀಡಿದ್ದ ಅವರು, ತರಳಬಾಳು ಸೇವಾ ಸಮಿತಿ ಹಾಗೂ ಶಿವಸೈನ್ಯದ ವತಿಯಿಂದ ಕೋವಿಡ್ ಸೋಂಕಿತರು, ಕೊರೊನಾ ವಾರಿಯರ್ಸ್‌ಗೆ ನೀಡುತ್ತಿರುವ ನಿತ್ಯ ದಾಸೋಹ ವ್ಯವಸ್ಥೆಯನ್ನು ಪರಿಶೀಲಿಸಿದ ನಂತರ ತಮ್ಮನ್ನು ಭೇಟಿಯಾದ ಸುದ್ದಿಗಾರರ ಜೊತೆ ಮಾತನಾಡಿದರು. (2ನೇ ಪುಟಕ್ಕೆ)

### ಜಿ.ಪಂ., ತಾ.ಪಂ ಚುನಾವಣೆ ಸದ್ಯಕ್ಕಿಲ್ಲ

ತಾಲ್ಲೂಕು ಪಂಚಾಯ್ತಿ ಮತ್ತು ಜಿಲ್ಲಾ ಪಂಚಾಯ್ತಿ ಚುನಾವಣೆಗಳನ್ನು ಡಿಸೆಂಬರ್‌ವರೆಗೂ ನಡೆಸಲು ಸಾಧ್ಯವಿಲ್ಲ ಎಂದು ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದರು. ಕೊರೊನಾ 2ನೇ ಅಲೆ ಸಂಪೂರ್ಣವಾಗಿ ನಿಯಂತ್ರಣವಾಗುವವರೆಗೆ ಚುನಾವಣೆ ನಡೆಸುವುದು ಅಸಾಧ್ಯ ಎಂದು ತಿಳಿಸಿದರು.

ದೇಶಾದ್ಯಂತ ಉಚಿತ ಲಸಿಕೆ ವಿತರಣೆಗೆ ಪ್ರಧಾನಮಂತ್ರಿ ಅವರ ದಿಟ್ಟ ಹೆಜ್ಜೆ ಸ್ವಾಗತಾರ್ಹ. ಕೊರೊನಾ ನಿಯಂತ್ರಣದ ಹಾಗೂ ಯೋಗ ದಿನಾಚರಣೆ ಬಗ್ಗೆ ಚರ್ಚಿಸಲಾಗಿದೆ ಎಂದರು. ಬಿಜೆಪಿ ಒಂದು ಕುಟುಂಬವಿದ್ದಂತೆ. ಸಣ್ಣಪುಟ್ಟ ಭಿನ್ನಾಭಿಪ್ರಾಯಗಳು ಸಹಜ, ಅಂತಹ ಗೊಂದಲಗಳನ್ನು ಬಗೆಹರಿಸಿಕೊಂಡು, ರಾಜ್ಯದಲ್ಲಿ ಬಿಜೆಪಿಯನ್ನು ಶಕ್ತಿಶಾಲಿಯನ್ನಾಗಿಸುವ ಪ್ರಯತ್ನದ ಬಗ್ಗೆ ಚರ್ಚೆ ನಡೆಸಲಾಗುವುದು ಎಂದರು.

## ಪ್ರವಾಹ ಎದುರಿಸಲು ಸಿದ್ಧ : ಮುಖ್ಯಮಂತ್ರಿ

**20 ಜಿಲ್ಲೆಗಳ ಜಿಲ್ಲಾಧಿಕಾರಿಗಳು ಕ್ರಮ ವಹಿಸಲು ಸಿಎಂ ಸೂಚನೆ**

ಬೆಂಗಳೂರು, ಜೂ. 19 - ಪ್ರವಾಹ ಪರಿಸ್ಥಿತಿ ಎದುರಿಸಲು ಸರ್ಕಾರ ಸನ್ನದ್ಧವಾಗಿದೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದ್ದಾರೆ.

ಕೊಡಗು ಸೇರಿದಂತೆ ರಾಜ್ಯದ 20 ಜಿಲ್ಲೆಗಳ ಜಿಲ್ಲಾಧಿಕಾರಿಗಳೊಂದಿಗೆ ವಿಡಿಯೋ ಸಂವಾದ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಈ ಜಿಲ್ಲೆಗಳಲ್ಲಿ ಅವಧಿಗಿಂತ ಮುನ್ನವೇ ಮುಂಗಾರು ಮಳೆ ಆರಂಭಗೊಂಡು, ಕೆಲವಡೆ ಪ್ರವಾಹ ಪರಿಸ್ಥಿತಿ ಮತ್ತು ನದಿಗಳು ಉಕ್ಕಿ ಹರಿಯುತ್ತಿವೆ ಎಂದಿದ್ದಾರೆ.

ಹಿಂದಿನ ಅನುಭವಗಳನ್ನು ಗಮನದಲ್ಲಿಟ್ಟುಕೊಂಡು, ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಿ. ಅಗತ್ಯ ಮತ್ತು ತುರ್ತು ಸಂದರ್ಭಗಳಲ್ಲಿ ಸರ್ಕಾರದಿಂದ ಯಾವ ರೀತಿ ಸಹಕಾರ ಬೇಕೋ (2ನೇ ಪುಟಕ್ಕೆ)

# 5+ಪಾಸಿಟಿವಿಟಿ ಸಾಲಿನಲ್ಲಿ ಜಿಲ್ಲೆ

## ದಾವಣಗೆರೆ ಸೇರಿ 13 ಜಿಲ್ಲೆಗಳಲ್ಲಿ ನಾಳೆಯಿಂದ ನಿರ್ಬಂಧ ಸಡಿಲಿಕೆ

ಬೆಂಗಳೂರು, ಜೂ. 19 – ರಾಜ್ಯದಲ್ಲಿ ಶೇ.5ರಿಂದ 10ರವರೆಗೆ ಪಾಸಿಟಿವಿಟಿ ದರ ಇರುವ ದಾವಣಗೆರೆ ಸೇರಿದಂತೆ 13 ಜಿಲ್ಲೆಗಳಿಗೆ ರಾಜ್ಯ ಸರ್ಕಾರ ಹಲವಾರು ನಿರ್ಬಂಧಗಳನ್ನು ಸಡಿಲಿಸಿದೆ. ಸೋಮವಾರದಿಂದ ಸಡಿಲಿಕೆ ಅನ್ವಯವಾಗಲಿದೆ.

ಈ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಈ ಹಿಂದೆ ಜೂ. 11ರ ಆದೇಶದಲ್ಲಿ ಹೊರಡಿಸಲಾದ ವಿನಾಯಿತಿಗಳು 13 ಜಿಲ್ಲೆಗಳಿಗೆ ಸಿಗಲಿವೆ ಎಂದು ಹೇಳಿದ್ದಾರೆ.

ಪಾಸಿಟಿವಿಟಿ ಕಡಿಮೆ ಇರುವ ಹಲವಾರು ಜಿಲ್ಲೆಗಳಿಗೆ ಕಳೆದ ಬಾರಿ ವಿನಾಯಿತಿ ನೀಡಲಾಗಿತ್ತು. ಅದರ ಅನ್ವಯ ಕಾರ್ಖಾನೆ, ಗಾರ್ಮೆಂಟ್ಸ್, ಅಂಗಡಿ, ಪಾರ್ಕ್, ಆಟೋ ಪ್ರಯಾಣ ಮತ್ತಿತರೆ ವಿಷಯಗಳಿಗೆ ವಿನಾಯಿತಿ ನೀಡಲಾಗಿತ್ತು.

ಈ ವಿನಾಯಿತಿಗಳು ಈ ಬಾರಿ 13 ಜಿಲ್ಲೆಗಳಾದ ಹಾಸನ, ಉಡುಪಿ, ದಕ್ಷಿಣ ಕನ್ನಡ, ಶಿವಮೊಗ್ಗ, ಚಾಮರಾಜನಗರ, ಚಿಕ್ಕಮಗಳೂರು, ಬೆಂಗಳೂರು ಗ್ರಾಮಾಂತರ, ದಾವಣಗೆರೆ, ಕೊಡಗು, ಧಾರವಾಡ, ಬಳ್ಳಾರಿ, ಚಿತ್ರದುರ್ಗ ಹಾಗೂ ವಿಜಯಪುರ ಜಿಲ್ಲೆಗಳಿಗೆ ಅನ್ವಯವಾಗಲಿವೆ.

ಈ ಹಿಂದೆ ಜೂ.11ರ ವಿನಾಯಿತಿಗಳ ಅನ್ವಯ ಎಲ್ಲಾ ಉತ್ಪಾದನಾ ಘಟಕಗಳು ಶೇ.50ರ ಸಾಮರ್ಥ್ಯದಲ್ಲಿ ಕಾರ್ಯ ನಿರ್ವಹಿಸಬಹುದು. ಗಾರ್ಮೆಂಟ್ಸ್ ವಲಯದ ಶೇ.30 ಸಿಬ್ಬಂದಿ ಕಾರ್ಯ ನಿರ್ವಹಿಸಬಹುದು.



ದಿನಸಿ ಅಂಗಡಿ, ಹಣ್ಣು, ತರಕಾರಿ, ಮಾಂಸ, ಮೀನು, ಡೈರಿ ಹಾಗೂ ಹಾಲಿನ ಬೂತ್‌ಗಳು ಬೆಳಿಗ್ಗೆ 6ರಿಂದ 2ರವರೆಗೆ ಕಾರ್ಯ ನಿರ್ವಹಿಸಬಹುದು.

ಪಡಿತರ ಹಾಗೂ ಮದ್ಯದ ಅಂಗಡಿಗಳಿಗೂ ಸಹ ಬೆಳಿಗ್ಗೆ 6ರಿಂದ 2ರವರೆಗೆ ವಿನಾಯಿತಿ ಇದೆ.

ಕಟ್ಟಡ ನಿರ್ಮಾಣ ಚಟುವಟಿಕೆ, ಕಟ್ಟಡ ದುರಸ್ತಿ ಹಾಗೂ ಅವುಗಳಿಗೆ ಸಂಬಂಧಿಸಿದ ಸರಕುಗಳನ್ನು ಮಾರುವ ಅಂಗಡಿಗಳಿಗೆ ಅನುಮತಿ ನೀಡಲಾಗಿದೆ.

ಪಾರ್ಕ್‌ಗಳು ಬೆಳಿಗ್ಗೆ 5ರಿಂದ 10ರವರೆಗೆ ತೆರೆಯಲು ಅನುಮತಿ ನೀಡಲಾಗಿದೆ. ಟ್ಯಾಕ್ಸಿ ಹಾಗೂ ಆಟೋ ರಿಕ್ಷಾಗಳಲ್ಲಿ ಗರಿಷ್ಠ ಇಬ್ಬರು ಪ್ರಯಾಣಿಸಬಹುದು. ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ಕಚೇರಿಗಳ ಜೊತೆಗೆ ಉಳಿದ ಕಚೇರಿಗಳು ಶೇ.50ರ ಸಿಬ್ಬಂದಿಯೊಂದಿಗೆ ಕಾರ್ಯ ನಿರ್ವಹಿಸಬಹುದು. ಆರೋಗ್ಯ ವಲಯದ ಕೌಶಲ್ಯ ತರಬೇತಿ ಕಾರ್ಯಕ್ರಮಗಳಿಗೆ ಅನುಮತಿ ನೀಡಲಾಗಿತ್ತು.

ಪಾಸಿಟಿವಿಟಿ ದರ ಶೇ.5ಕ್ಕಿಂತ ಕಡಿಮೆ ಇರುವ 16 ಜಿಲ್ಲೆಗಳಲ್ಲಿ ಸಂಜೆ 5 ಗಂಟೆಯವರೆಗೆ ಎಲ್ಲಾ ಅಂಗಡಿಗಳನ್ನು ತೆರೆಯಬಹುದು (2ನೇ ಪುಟಕ್ಕೆ)

### ಜಿಲ್ಲೆಯಲ್ಲಿ 194 ಪಾಸಿಟಿವ್, 11 ಸಾವು, 828 ಗುಣಮುಖ

ದಾವಣಗೆರೆ, ಜೂ.19- ಜಿಲ್ಲೆಯಲ್ಲಿ 194 ಕೊರೊನಾ ಪಾಸಿಟಿವ್ ಪ್ರಕರಣಗಳು ಶನಿವಾರ ವರದಿಯಾಗಿವೆ. 11 ಜನರು ಸೋಂಕಿನಿಂದ ಮೃತಪಟ್ಟಿದ್ದು, 828 ಜನರು ಗುಣಮುಖರಾಗಿರುವುದಾಗಿ ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ

ದಾವಣಗೆರೆಯಲ್ಲಿ 62, ಹರಿಹರ 30, ಜಗಳೂರು 25, ಚನ್ನಗಿರಿ 35, ಹೊನ್ನಾಳಿ 37 ಹಾಗೂ ಹೊರ ಜಿಲ್ಲೆಯ 5 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ.

ಜಿಲ್ಲೆಯಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 1939ಕ್ಕೆ ಇಳಿಕೆಯಾಗಿದ್ದು, ಇಲ್ಲಿಯವರೆಗೆ 487 ಜನರು ಸೋಂಕಿನಿಂದಾಗಿ ಮೃತಪಟ್ಟಿದ್ದಾರೆ.

### ಜನಸಂದಣಿ ತಡೆಯದಿದ್ದರೆ 8 ವಾರಗಳಲ್ಲೇ 3ನೇ ಅಲೆಯ ಎಚ್ಚರಿಕೆ !

ನವದೆಹಲಿ, ಜೂ. 19 – ಕೊರೊನಾ ತಡೆಗಾಗಿ ಸೂಕ್ತ ನಡವಳಿಕೆ ತೋರದಿದ್ದರೆ ಹಾಗೂ ಜನಸಂದಣಿಯನ್ನು ತಡೆಯದೇ ಹೋದರೆ ಕೊರೊನಾದ ಮೂರನೇ ಅಲೆ ಆರರಿಂದ ಎಂಟು ವಾರಗಳಲ್ಲೇ ಬರಬಹುದು ಎಂದು ಎಐಐಎಂಎಸ್ ನಿರ್ದೇಶಕ ರಣದೀಪ್ ಗುಲೇರಿಯ ಎಚ್ಚರಿಸಿದ್ದಾರೆ. (2ನೇ ಪುಟಕ್ಕೆ)

**ಭದ್ರಾ ಜಲಾಶಯ**

ಇಂದಿನ ಮಟ್ಟ : 148 ಅಡಿ 6 ಇಂಚು
ಒಳ ಹರಿವು : 17885 ಕ್ಯೂಸೆಕ್ಸ್
ಹೊರ ಹರಿವು : 73 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 135.7 ಅಡಿ


ಹುಟ್ಟುಹಬ್ಬದ ಶುಭಾಶಯಗಳು



ಇಂದು ಹುಟ್ಟುಹಬ್ಬದ ಸಂಭ್ರಮದಲ್ಲಿರುವ
ಶ್ರೀ ಕಲ್ಲಳ್ಳಿ ರುದ್ರೇಶ್
ಅವರಿಗೆ ಹಾರ್ದಿಕ ಶುಭಾಶಯಗಳು. ದೇವರು ಅವರಿಗೆ ಆಯುರಾರೋಗ್ಯ ಭಾಗ್ಯ, ಸುಖ-ಸಮೃದ್ಧಿ ನೀಡಲಿ ಎಂದು ಪ್ರಾರ್ಥಿಸುತ್ತೇನೆ.





ಕಲ್ಲಳ್ಳಿ ನಾಗರಾಜ್ ಶಾಮನೂರು
ಮಹಾನಗರ ಪಾಲಿಕೆ ಸದಸ್ಯರು, 43ನೇ ವಾರ್ಡ್

ಎಂ.ಡಿ. ಮಾರುತಿ
ಕಾಂಗ್ರೆಸ್ ಯುವ ಮುಖಂಡರು, ಶಾಮನೂರು.




ಪ್ರಥಮ ವರ್ಷದ ಪುಣ್ಯಸ್ಮರಣೆ



ದಿ. ದ್ರಾಕ್ಷಾಯಣಮ್ಮನವರು
(ದಿ. ಕೊಂಡಜ್ಜಿ ಮಹೇಶ್ವರಪ್ಪನವರ ಧರ್ಮಪತ್ನಿ)
ನೀವು ನಮ್ಮನ್ನಗಲಿ ಒಂದು ವರ್ಷವಾಯಿತು. ಸದಾ ನಿಮ್ಮ ಸ್ಮರಣೆಯಲ್ಲಿರುವ ಹಾಗೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ
ಐವರು ಪುತ್ರಿಯರು, ಓರ್ವ ಪುತ್ರ,
ಅಳಿಯಂದಿರು, ಮೊಮ್ಮಕ್ಕಳು, ಕೊಂಡಜ್ಜಿ ವಂಶಸ್ಥರು
ಹಾಗೂ ಬಂಧು - ಮಿತ್ರರು, ಶಾಮನೂರು.



ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 19.06.2021ರಂದು
ಅಕಾಲಿಕವಾಗಿ ನಿಧನರಾದ
ಬಾಲಾಜಿ ರೈಸ್‌ಮಿಲ್ ಮಾಲೀಕರಾದ
ಶ್ರೀ ಎಂ. ವೀರಭದ್ರರಾವ್
ಅವರಿಗೆ ಗೌರವಪೂರ್ಣ ಶ್ರದ್ಧಾಂಜಲಿ. ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.
ಅಧ್ಯಕ್ಷರು ಮತ್ತು ಕಾರ್ಯದರ್ಶಿ ಹಾಗೂ ಪದಾಧಿಕಾರಿಗಳು
ದಾವಣಗೆರೆ ಜಿಲ್ಲಾ ಅಕ್ಕಿ ಗಿರಣಿ ಮಾಲೀಕರ ಸಂಘ (ರಿ.) ದಾವಣಗೆರೆ.



॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥
ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಸಿಟಿ
ಎಸ್.ಎಸ್. ಬಡಾವಣೆ 'ಬಿ' ಬ್ಲಾಕ್ ನಿವಾಸಿ,
ಶ್ರೀಮತಿ ಅನಸೂಯ ಮಲ್ಲಿಕಾರ್ಜುನ,
ಶ್ರೀ ಕೀರ್ತಿಕುಮಾರ್ ಎಂ. ಮತ್ತು
ಶ್ರೀಮತಿ ವನುಷ ಬಾರೆಗಲ್
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 18.06.2021 ನೇ ಶುಕ್ರವಾರ ಸಂಜೆ 8.50 ಕ್ಕೆ ನನ್ನ ಪತಿಯವರಾದ
ಶ್ರೀ ಮಲ್ಲಿಕಾರ್ಜುನಯ್ಯ ಎ.ವಿ.
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಶಿವಗಣಾರಾಧನೆ'ಯನ್ನು ದಿನಾಂಕ 20.06.2021ನೇ ಭಾನುವಾರ ಬೆಳಿಗ್ಗೆ 11 ಗಂಟೆಗೆ ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ.
ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
- ಎ.ವಿ. ಶಿವದೇವ
- ಶ್ರೀಮತಿ ವಿಜಯ ವೀರೇಶ್ ಮತ್ತು ಕುಟುಂಬ ವರ್ಗ
- ಶ್ರೀಮತಿ ಸುಜಾತ, ಶ್ರೀ ನಿರಂಜನ್ ಎಂ.ಹೆಚ್.ಎಂ. ಮತ್ತು ಕುಟುಂಬ ವರ್ಗ
- ಶ್ರೀಮತಿ ಸವಿತ, ಶ್ರೀ ನಿರಂಜನ್ ಎ.ವಿ. ಮತ್ತು ಕುಟುಂಬ ವರ್ಗ



ಎಂ.ಪಿ. ಬಸವರಾಜ್ ನಿಧನ



ದಾವಣಗೆರೆ ನಗರ ವಾಸಿ ಕೆ.ಪಿ.ಟಿ.ಸಿ.ಎಲ್ ನಿವೃತ್ತ ಎಇ
ಶ್ರೀ ಎಂ.ಪಿ ಬಸವರಾಜ್
ಅವರು ದಿನಾಂಕ 19.06.2021ರ ಶನಿವಾರ ಬೆಳಿಗ್ಗೆ 6.30ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 64 ವರ್ಷ ವಯಸ್ಸಾಗಿತ್ತು . ಪತ್ನಿ, ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 19.06.2021ರ ಶನಿವಾರ ಮಧ್ಯಾಹ್ನ 1.30ಕ್ಕೆ ಸ್ವಗ್ರಾಮ ಮೂಡಲ ಮಾಚಿಕೆರೆ ಮೃತರ ಜಮೀನಿನಲ್ಲಿ ನೆರವೇರಿಸಲಾಯಿತು.
ದುಃಖತಪ್ತ ಕುಟುಂಬವರ್ಗ
ಪತ್ನಿ, ಮಕ್ಕಳು ಹಾಗೂ ಬಂಧು-ಮಿತ್ರರು.
ಮೊ: 9036111268




ಎಂ. ವೀರಭದ್ರರಾವ್ ನಿಧನ



ದಾವಣಗೆರೆ ಎಂ.ಸಿ.ಸಿ. 'ಎ' ಬ್ಲಾಕ್ ವಾಸಿ
ಶ್ರೀ ಬಾಲಾಜಿ ಇಂಡಸ್ಟ್ರೀಸ್ ರೈಸ್‌ಮಿಲ್ ಮಾಲೀಕರಾದ
ಶ್ರೀಯುತ ಎಂ. ವೀರಭದ್ರರಾವ್ ಅವರು
ದಿ: 19-6-2021 ರ ಶನಿವಾರ ಬೆಳಿಗ್ಗೆ 3 ಗಂಟೆಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಶ್ರೀಯುತರು ಪತ್ನಿ, ನಾಲ್ವರು ಪುತ್ರರು, ಓರ್ವ ಪುತ್ರಿ ಹಾಗು ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಶ್ರೀಯುತರ ಅಂತ್ಯಕ್ರಿಯೆ ದಿನಾಂಕ 19-06-2021ರ ಮಧ್ಯಾಹ್ನ 12 ಗಂಟೆಗೆ ಕುಂದುವಾಡ ಕೆರೆಯ ಹತ್ತಿರವಿರುವ ವೈಕುಂಠ ಧಾಮದಲ್ಲಿ ನೆರವೇರಿಸಲಾಯಿತು.
ಇಂತಿ ದುಃಖತಪ್ತ ಕುಟುಂಬ ವರ್ಗ: ಪತ್ನಿ ಶ್ರೀಮತಿ ಎಂ. ವೆಂಕಟಲಕ್ಷ್ಮಿ ರಾಜ್ಯಂ
ಪುತ್ರರಾದ ಡಾ॥ ಎಂ.ವಿ.ವಿ. ಸತ್ಯನಾರಾಯಣ ಮತ್ತು ಶ್ರೀಮತಿ ಸುಧಾ
ಎಂ. ಶ್ರೀನಿವಾಸ ಶ್ರೀಮತಿ ರಜಿನಿ
ಡಾ॥ ಎಂ. ವೆಂಕಟರಮಣರಾವ್ ಶ್ರೀಮತಿ ಡಾ॥ ಅನುರಾಧ
ಎಂ.ವಿ. ಮಲ್ಲಿಕಾರ್ಜುನ ಶ್ರೀಮತಿ ರಾಜ್ಯಲಕ್ಷ್ಮಿ, ರೂಪಾರಾಣಿ
ಮಗಳು ಶ್ರೀಮತಿ ಸಾಯಿಪದ್ಮ ಅಳಿಯ ಜಯಂತ್ ಮತ್ತು ಮೊಮ್ಮಕ್ಕಳು
ತಂಗಿ ಶ್ರೀಮತಿ ಕೆ. ಸೀತಾಮಹಾಲಕ್ಷ್ಮಿ ಮತ್ತು ಅಳಿಯ ವೆಂಕಟಸುಬ್ಬರಾವ್
ತಮ್ಮ ಎಂ. ವೆಂಕಟೇಶ್ವರರಾವ್ ಮತ್ತು ಮಕ್ಕಳು
* ಕೆ.ಅನ್ವಂತರಾವ್ ಮತ್ತು ಮಕ್ಕಳು * ಕೆ.ವಿ.ವಿ. ಸತ್ಯನಾರಾಯಣ ಮತ್ತು ಮಕ್ಕಳು
ಹಾಗು ಕಾರ್ಮಿಕ ವರ್ಗದವರು, ಶ್ರೀ ಬಾಲಾಜಿ ಇಂಡಸ್ಟ್ರೀಸ್ ರೈಸ್‌ಮಿಲ್, ದಾವಣಗೆರೆ.



ದ್ವಿತೀಯ ಪೀಠಾರೋಹಣ ಮಹೋತ್ಸವ ಶುಭಾಶಯಗಳು



ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿಯವರು ಆಧುನಿಕ ಶಿಕ್ಷಣದಲ್ಲಿ ಉನ್ನತ ಸಾಧನೆ ಮಾಡಿದ ಹಾಗೂ ವೇದ, ಉಪನಿಷತ್, ಭಗವದ್ಗೀತೆಗಳ ಪ್ರತಿಪಾದಕರಾಗಿದ್ದು, ಇವರು ಪೀಠಕ್ಕೆ ದೊರೆತಿರುವುದು ಅಪಾರ ಸಂತಸವಾಗಿದೆ. ಸ್ವಾಮೀಜಿ ಅವರಿಗೆ ಆರ್ಯವೈಶ್ಯ ಸಮುದಾಯದ ಅಧ್ಯಾತ್ಮಿಕ ಉನ್ನತಿಯ ಜವಾಬ್ದಾರಿ ಅವರ ಮೇಲಿದೆ.
ಇತ್ತೀಚೆಗೆ ದಾವಣಗೆರೆ ನಗರಕ್ಕೆ ಆಗಮಿಸಿದ ಸಂದರ್ಭದಲ್ಲಿ ಆರ್ಯವೈಶ್ಯ ಮಹಾಜನ ಸಮಿತಿಯಿಂದ ನಡೆಯುತ್ತಿರುವ ಶ್ರೀ ಕನ್ನಿಕಾಪರಮೇಶ್ವರಿ ದೇವಸ್ಥಾನದ ಕಟ್ಟಡ ಕಾಮಗಾರಿಯನ್ನು ವೀಕ್ಷಿಸಿ ಕಾಮಗಾರಿ ಶೀಘ್ರವಾಗಿ ಪೂರ್ಣಗೊಳ್ಳಲಿ ಎಂದು ಸಂತೋಷದಿಂದ ಹಾರೈಸಿದ್ದರು.
ದಿನಾಂಕ : 20.06.2021ನೇ ಭಾನುವಾರ ನಡೆಯಲಿರುವ
ಪೂಜ್ಯ ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಸರಸ್ವತಿ ಶ್ರೀಗಳ
ದ್ವಿತೀಯ ಪೀಠಾರೋಹಣ ಮಹೋತ್ಸವಕ್ಕೆ
ಭಕ್ತಿಪೂರ್ವಕ ಶುಭಾಶಯಗಳು...
ಎಸ್.ಟಿ. ಕುಸುಮ ಶ್ರೇಷ್ಠಿ, ಮಾಜಿ ಅಧ್ಯಕ್ಷರು, ದಲ್ಲಾಲರ ಸಂಘ, ದಾವಣಗೆರೆ.
ಡಾ॥ ವೆಂಕಟೇಶ್ ಗುಪ್ತ ಎಸ್.ಕೆ.
ಪ್ರಶಾಂತ್ ಗುಪ್ತ ಎಸ್.ಕೆ., ತಿಮ್ಮರಾಜ್ ಗುಪ್ತ ಎಸ್.ಕೆ.

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಮನೆ ಮಾರಾಟಕ್ಕೆ**
1) 40×60 ದಕ್ಷಿಣ, 30×40 ಉತ್ತರ, ವಿದ್ಯಾನಗರ. 2) 30×40 ಪೂರ್ವ, ಭೂಮಿಕ ನಗರ. 3) 30×50 ಪಶ್ಚಿಮ, ಹೈಟೆಕ್ ಲೇಔಟ್. 4) 40×60 ಎಂ.ಸಿ.ಸಿ. 'ಬಿ' ಬ್ಲಾಕ್. 5) 30×35 ನಿಜಲಿಂಗಪ್ಪ ಬಡಾವಣೆ ಇನ್ನು ಅನೇಕ
ಕಿರಣ್ ಬೂಸ್ನೂರ್
97315 63409, 98440 63409
(Appartment ಮಾರಾಟಕ್ಕೆ ಇದೆ)

**ಶ್ರೇಯಸ್ ಉದರ, ಲಿವರ್, ಕರುಳು ರೋಗಗಳ ಚಿಕಿತ್ಸಾ ಕೇಂದ್ರ**
ಡಾ. ಇ.ಆರ್. ಸಿದ್ದೇಶಿ
M.D. (MED), D.M. (Gastro), F.A.C.G. (USA), P.G.C.C. Diab. Care (Aust)
ಉದರ, ಲಿವರ್, ಕರಳು, ಪ್ಯಾನ್‌ಕ್ರಿಯಾಸ್, ಎಂಡೋಸ್ಕೋಪಿ, ಸಕ್ಕರೆ ಕಾಯಿಲೆ ತಜ್ಞರು
8th Main, 8th Cross, P.J. Extension, Davangere.
08192-237325, 94837 23166

**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
ಪ್ರಸಾದ ದಾಸೋಹ
ಇಂದಿನ ಪ್ರಸಾದ ವಿತರಕರು
ಶ್ರೀಮತಿ ಮತ್ತು ಶ್ರೀ ಪಕ್ಕೀರಪ್ಪ ಗುಜ್ಜರ್ ಮತ್ತು ಇವರ ಕುಟುಂಬ ವರ್ಗದವರ ಸೇವಾರ್ಥ
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಮನೆಗಳು ಮಾರಾಟಕ್ಕಿವೆ**
40x60 North 3 ಬೆಡ್ ರೂಂ ಮನೆ, ಕುವೆಂಪು ಬಡಾವಣೆಯಲ್ಲಿ, 30x50 North, 30x50 West, 30x40 East 30x40 West, 20x30 East, ಹೈಟೆಕ್ ಲೇಔಟ್‌ನಲ್ಲಿ, ಚಿಗಟೇರಿ ಲೇಔಟ್‌ನಲ್ಲಿ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110
93410 14130

**ಮರದ ಗಾಣದ ಶೇಂಗಾ ಎಣ್ಣೆ, ಕೊಬ್ಬರಿ ಎಣ್ಣೆ ತಯಾರಿಕಾ ಘಟಕ**
ನಮ್ಮಲ್ಲಿ ಶೇಂಗಾ ಎಣ್ಣೆ ಮತ್ತು ಕೊಬ್ಬರಿ ಎಣ್ಣೆ ಹಾಗೂ ಸಿರಿಧಾನ್ಯಗಳು ದೊರೆಯುತ್ತವೆ.
ಸಂಪರ್ಕಿಸಿ : ಮೈಸೂರು ನ್ಯಾಚುರಲ್ಸ್
ಶಾಮನೂರು. ಮೊ. 99717-95156

ಅನ್ನವೇ ದೇವರು
**ಕರುಣಾ ಜೀವ ಕಲ್ಯಾಣ ಟ್ರಸ್ಟ್**
ಇಂದಿನ ಅನ್ನ ದಾಸೋಹ ದಾಸೋಹಿಗಳು
Dr. G.C.Basavaraja
M. S. (Ortho), F.I.C.S. (U.S.A)
Prof of Orthopaedics., J.J.M. Medical College.
ಧನ ಸಹಾಯ ಮಾಡುವವರು ಸಂಪರ್ಕಿಸಿ
91104 55199

**ಸೈಟ್‌ಗಳು ಮಾರಾಟಕ್ಕಿವೆ**
ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿ, ಡಾಲರ್ಸ್ ಕಾಲೋನಿಯಲ್ಲಿ 30x54 East, 40 ಅಡಿ ರೋಡಿಗಿದೆ, 30x50 North, 30x50 west, 40x60 North, 40x60 West, 60x45 North East Corner
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110
93410 14130

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ನರ್ಸ್‌ಗಳು, ಆಯಾ ಬೇಕಾಗಿದ್ದಾರೆ. ನುರಿತ, ಅನುಭವವಿರುವ A.N.M. ಮತ್ತು G.N.M. ಆದವರು. ಬಯೋಡೇಟಾದೊಂದಿಗೆ ಸಂಪರ್ಕಿಸಿ.
98450 35710

**ಮನೆ ಬಾಡಿಗೆಗೆ ಇದೆ**
ನಿಟುವಳ್ಳಿ ಮುಖ್ಯರಸ್ತೆ, ಲೇಬರ್ ಕಾಲೋನಿಯಲ್ಲಿ 2 ಬೆಡ್‌ರೂಂನ ಸಂಪೂರ್ಣ ವಾಸ್ತುವಿರುವ ಉತ್ತರ ದಿಕ್ಕಿನ ನೆಲಮಹಡಿಯಲ್ಲಿ ಹೊಸ ಮನೆ ಬಾಡಿಗೆಗೆ ಇದೆ. (ಸಸ್ಯಹಾರಿಗಳಿಗೆ ಮಾತ್ರ)
99866 17483, 78996 81386

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಉತ್ತಮ ತಳಿಯ ತೆಂಗು, ಅಡಿಕೆ, ಮಾವು, ಸಪೋಟಾ, ಬೆಟ್ಟದ ನೆಲ್ಲಿ, ತೇಗ, ಸಿಲ್ವರ್, ಹೆಬ್ಬೇವು, ಶ್ರೀಗಂಧ, ಗುಲಾಬಿ ಹಾಗೂ ಇತರೆ ಸಸಿಗಳು ದೊರೆಯುತ್ತವೆ. ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ.
ಸುಬ್ರಮಣಿ ಆಗ್ರೋಟೆಕ್
ಶಕ್ತಿನಗರ, ನಿಟುವಳ್ಳಿ, ದಾವಣಗೆರೆ.
94484 39639, 63665 96479

**ಸೈಟುಗಳು ಮಾರಾಟಕ್ಕಿವೆ**
ಶಿವಪಾರ್ವತಿ ಬಡಾವಣೆಯಲ್ಲಿ 30×40 ಪೂರ್ವ, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 30×50 ಉತ್ತರ ಅಳತೆಯ ಸೈಟುಗಳು ಮಾರಾಟಕ್ಕಿವೆ.
78996 81386, 99866 17483

**WHOLESALE PRICE**
Oximeter (2 years Replacement warranty), Organic Sanitizer, Spirometer, Vaporizer, Thermometer, Variety N95 Original Mask, Face shield, Face guard, Sodium, All Covid-19 Related Products available in wholesale price.
Contact : 80882 10419

**ಜಮೀನು ಮಾರಾಟಕ್ಕಿದೆ**
ಹಿರೇಮೇಗಳಗೆರೆ ಸಮೀಪದಲ್ಲಿ 5.53 ಮತ್ತು 6.55 ಎಕರೆ ಕಾರ್ನರ್ ಒಟ್ಟು ವಿಸ್ತೀರ್ಣ 12.08 ಎಕರೆ, ಕೆಂಪು ಮಣ್ಣಿನ ಜಮೀನು ಮಾರಾಟಕ್ಕಿದೆ. 3 ಬೋರ್‌ಗಳಿವೆ. ಕಾಡಜ್ಜಿ ಕೃಷಿ ವಿಜ್ಞಾನ ಕೇಂದ್ರದಿಂದ 3 ಕಿಲೋಮೀಟರ್‌ದಲ್ಲಿದೆ. ದಾವಣಗೆರೆಯಿಂದ 10 ಕಿ.ಮೀ.ನಲ್ಲಿದೆ.
ಬೂಸ್ನೂರು ಕಿರಣ್ (ಏಜೆಂಟ್)
98440 63409, 97315 63409

**ಜಮೀನು ಮಾರಾಟಕ್ಕಿದೆ**
ಪುಣಭಘಟ್ಟ ಗ್ರಾಮ, ಅರಸೀಕೇರಿ ಹೋಬಳಿ, ಸರ್ವೇ ನಂ. 335/A-4-08 ಸೆಂಟ್ಸ್, ಸರ್ವೇ ನಂ. 335/B-2-43 ಸೆಂಟ್ಸ್, ಸರ್ವೇ ನಂ. 335/1 - 1.62 ಸೆಂಟ್ಸ್ ಒಟ್ಟು 8.13 ಸೆಂಟ್ಸ್, 2 ಪಂಪ್‌ಸೆಟ್ ಇರುವ ಜಮೀನು ಮಾರಾಟಕ್ಕಿದೆ.
9972602950

**ಮನೆ ಅಡುಗೆ, ಹಳ್ಳಿ ಊಟ**
ಮನೆಯಲ್ಲಿ ತಯಾರಿಸಿದ ಶುದ್ಧ ಸಸ್ಯಹಾರಿ ತಿಂಡಿ, ಊಟ ದೊರೆಯುತ್ತದೆ. ನಿಮ್ಮ ಮನೆಗೇ ತಲುಪಿಸಲಾಗುವುದು. ಕರೆ ಮಾಡಿ.
63635 43487

**ಮಾರಾಟಕ್ಕೆ**
ಎಸ್.ಎಸ್ ಲೇಔಟ್‌ನಲ್ಲಿ 30x40 ಡುಪ್ಲೆಕ್ಸ್ ಮನೆ (ಪೂರ್ವ), ಸರಸ್ವತಿ ನಗರ 20x40 (ಪೂರ್ವ) ಮನೆ, ಮೌನೇಶ್ವರ ಬಡಾವಣೆ 20x30 ಡಬಲ್ ಫ್ಲೋರ್ ಮನೆ (ಉತ್ತರ), ಶಕ್ತಿನಗರ ಡುಪ್ಲೆಕ್ಸ್ 30x50 ಮನೆ (ಪೂರ್ವ) ಗ್ಲಾಸ್ ಹೌಸ್ 40x80 (ಪಶ್ಚಿಮ) ಸೈಟ್ ಮಾರಾಟಕ್ಕಿವೆ.
98804 40602

**ಮನೆ ಮತ್ತು ರೂಂ ಬಾಡಿಗೆಗೆ**
2 BHK ಮನೆ ಮತ್ತು ಡಬಲ್ ರೂಂ ಬಾಡಿಗೆಗೆ ಇವೆ. 2ನೇ ಫ್ಲೋರ್‌ನಲ್ಲಿ (ಸಸ್ಯಹಾರಿಗಳಿಗೆ), 14ನೇ ಕ್ರಾಸ್, ಆಂಜನೇಯ ಬಡಾವಣೆ
ಮೊ: 98446 05839

**ಮರಗಳು ಮತ್ತು ಕಟ್ಟಿಗೆ ಸಿಗುತ್ತವೆ**
ದಾವಣಗೆರೆ ತಾಲ್ಲೂಕು ಮತ್ತಿ ಗ್ರಾಮದಲ್ಲಿ ಮರಗಳು ಮತ್ತು ಕಟ್ಟಿಗೆ ಸಿಗುತ್ತವೆ. ಸಂಪರ್ಕಿಸಿ
99451 59582

**ಕೆಲಸಕ್ಕೆ ಬೇಕಾಗಿದ್ದಾರೆ**
ಹೊಸದುರ್ಗದಲ್ಲಿ ಮನೆಯಲ್ಲೇ ಇದ್ದು ಮಕ್ಕಳನ್ನು ನೋಡಿಕೊಳ್ಳಲು ಮತ್ತು ಮನೆ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ. ಊಟ ಮತ್ತು ವಸತಿ ಉಚಿತವಾಗಿರುತ್ತದೆ.
7353851444
7353951444

**ತೆಂಗಿನ ಸಸಿಗಳು ಸಿಗುತ್ತವೆ**
1 ವರ್ಷ ಮತ್ತು ಎರಡುವರೆ ವರ್ಷಗಳ ತೆಂಗಿನ ಸಸಿಗಳು ಮತ್ತಿ ಗ್ರಾಮದಲ್ಲಿ ಸಿಗುತ್ತವೆ.
ಸಂಪರ್ಕಿಸಿ : 99451 59582

**ಮನೆ ಲೀಸ್‌ಗಿದೆ**
#5626/7 "ಜ್ಯೋತಿ ನಿಲಯ" ಎಸ್.ಎಸ್. ಬಡಾವಣೆ 'ಬಿ' ಬ್ಲಾಕ್ ಡಬಲ್ ಬೆಡ್‌ರೂಂ, ವಾಸ್ತು ಪ್ರಕಾರ ಇದ್ದು, ಗ್ರೌಂಡ್ ಫ್ಲೋರ್ ಮನೆ, ಅಳತೆ 50x30 ಶುದ್ಧ ಸಸ್ಯಹಾರಿಗಳಿಗೆ ಮಾತ್ರ. ಯಾವುದೇ ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಶ್ರೀ ರಾಘವೇಂದ್ರ ನರ್ಸಿಂಗ್ ಕಾಲೇಜ್ ಹತ್ತಿರ ಇಂಜಿನಿಯರ್ ಅಸೋಸಿಯೇಷನ್ ಬಿಲ್ಡಿಂಗ್.
93410 04279 ಸುರೇಶ್ ಕುಮಾರ್ ಎ.ಎನ್
97417 40929 ರಾಮಕೃಷ್ಣ ಎ.ಎಸ್

**ಮನೆ ಬಾಡಿಗೆಗೆ ಇದೆ**
ಮೊದಲನೇ ಮಹಡಿ, ಪೂರ್ವ ದಿಕ್ಕಿನ ವಾಸ್ತುವುಳ್ಳ 2 ಬೆಡ್ ರೂಂ ಮನೆ ಬಾಡಿಗೆಗೆ ಇದೆ. (ಸಸ್ಯಹಾರಿಗಳಿಗೆ ಮಾತ್ರ) #3366/22, 2ನೇ ಮುಖ್ಯರಸ್ತೆ, 3ನೇ ಕ್ರಾಸ್, ವಿದ್ಯಾನಗರ, ವಿನಾಯಕ ಬಡಾವಣೆ.
ಫೋ. : 86603 58981

**ಮಹಿಳೆ ಬೇಕಾಗಿದ್ದಾರೆ**
ಪ್ರತಿದಿನ ಸಂಜೆ 5.30ರಿಂದ ಬೆಳಿಗ್ಗೆ 8.30ರವರೆಗೆ ವಯಸ್ಸಾದವರನ್ನು ನೋಡಿಕೊಳ್ಳಲು ಮಹಿಳೆ ಬೇಕಾಗಿದ್ದಾರೆ. ಜೊತೆಗೆ, ಕಸ, ಬಟ್ಟೆ ತೊಳೆಯಲು ಹೆಣ್ಣು ಮಕ್ಕಳು ಬೇಕಾಗಿದ್ದಾರೆ. ಸಂಪರ್ಕಿಸಿ :
63639-54459

**ಮನೆ ಬಾಡಿಗೆಗೆ ಇದೆ**
ಎಸ್.ಎಸ್. ಲೇಔಟ್ 'ಎ' ಬ್ಲಾಕ್, 1ನೇ ಮುಖ್ಯ ರಸ್ತೆ, 6ನೇ ಕ್ರಾಸ್‌ನಲ್ಲಿರುವ "ರೇಣುಕ ಸದನ" ಮನೆಯ ಮೊದಲನೇ ಮಹಡಿಯಲ್ಲಿ 2BHK ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ
94489 61452, 86188 36903
93411 94734

**ಮನೆ ಮಾರಾಟಕ್ಕೆ**
14x36 ರಲ್ಲಿ ಮಹಡಿ ಮನೆ ಮಾರಾಟಕ್ಕಿದೆ.
63663 27369

**WANTED**
Senior Marketing Manager wanted to work for a reputed company.
Salary:25,000 up to 40,000
Experience 8 to 10 years
96329-38111

**ಸ್ಟಾರ್ ಸ್ಪೋರ್ಟ್ಸ್ ದಾವಣಗೆರೆ**
ಇವರಿಂದ ಅಂತರ ರಾಷ್ಟ್ರೀಯ ಯೋಗ ದಿನದ (21.06.2021) ಶುಭಾಶಯಗಳು. ನಮ್ಮಲ್ಲಿ ಯೋಗ ತರಬೇತಿಗೆ ಬೇಕಾದ ಉತ್ತಮ ಶ್ರೇಣಿಯ ಯೋಗ ಮ್ಯಾಟ್, ಯೋಗ ಬ್ರಿಕ್ಸ್, ಯೋಗ ಬಾಲ್ ಹಾಗೂ ಕೇರಂ ಬೋರ್ಡ್, ಕ್ರಿಕೆಟ್ ಬ್ಯಾಟ್ ಸೆಟ್, ಶಟಲ್ ಬ್ಯಾಟ್,ಕಾಕ್, ಸ್ಪೋರ್ಟ್ಸ್ ಶೂ, ಟ್ರ್ಯಾಕ್ ಸೂಟ್ಸ್, ವಾಲಿಬಾಲ್, ಫುಟ್‌ಬಾಲ್, ಬ್ಯಾಸ್ಕೆಟ್ ಬಾಲ್ ಇತರೆ ಎಲ್ಲ ತರಹದ ಸ್ಪೋರ್ಟ್ಸ್ ಸಾಮಗ್ರಿಗಳು ಹಾಗೂ ಜಿಮ್ ವಸ್ತುಗಳು ಲಭ್ಯವಿರುತ್ತವೆ.
83101 54195, 83104 69873

**ಮನೆ ಬಾಡಿಗೆಗೆ/ಲೀಸ್ ಗಿದೆ**
ಸರಸ್ವತಿ ಬಡಾವಣೆ, ಜಯನಗರ, ಶಿವಕುಮಾರಸ್ವಾಮಿ ಬಡಾವಣೆ, ಶಕ್ತಿ ನಗರ, ಆಂಜನೇಯ ಬಡಾವಣೆ, ಸಿದ್ದವೀರಪ್ಪ ಬಡಾವಣೆಯಲ್ಲಿ ಮನೆಗಳು ಬಾಡಿಗೆಗೆ/ಲೀಸ್ ಗೆ ಇವೆ. ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಮನೆಗಳು ಬಾಡಿಗೆಗಿವೆ.
99726-75759

**ತಕ್ಷಣ ಬೇಕಾಗಿದ್ದಾರೆ**
ಕೋರಿಯರ್ ಆಫೀಸ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. Two wheeler ಬೈಕ್ ಇರಬೇಕು. ಪೆಟ್ರೋಲ್ ಭತ್ಯೆ ಕೊಡಲಾಗುವುದು. ಬೆಳಿಗ್ಗೆ 8 ರಿಂದ ಸಂಜೆ 6 ರವರೆಗೆ
Call : 9480795548, 87468 00714
Whatsapp No: 70199 83025 (Resume)

**ಜಾಗ ಮಾರಾಟಕ್ಕಿದೆ**
ಪಿ.ಜೆ. ಬಡಾವಣೆ, 3ನೇ ಮುಖ್ಯರಸ್ತೆ, ಚೇತನ ಹೋಟೆಲ್ ಹತ್ತಿರ, 80x30 ಅಡಿ ಅಳತೆಯ ಜಾಗ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ :
97310 55765

**2BHK ಮನೆ ಲೀಸ್‌ಗಿದೆ**
ಶ್ರೀ ಶಿವ ಚಿದಂಬರ ಬಡಾವಣೆ, ಸರಸ್ವತಿ ನಗರದಲ್ಲಿ 2BHK ಮನೆ ಲೀಸ್‌ಗೆ ಇದೆ (ಸಸ್ಯಹಾರಿಗಳಿಗೆ ಮಾತ್ರ) ಸಂಪರ್ಕಿಸಿ:
94816 88894
95731 50630

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಮನೆಯ ನೀರಿನ ತೊಟ್ಟಿ, ಟ್ಯಾಂಕುಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.**
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ನಿಮ್ಮ ಮನೆಯಲ್ಲಿ ನೀರು ಸೋರುತ್ತಿದೆಯೇ ?**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗುವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್ - 96065 57066

**ಬಿಲ್ಡಿಂಗ್ ಮಾರಾಟಕ್ಕಿದೆ**
ವೈಷ್ಣವಿ ನಿಲಯ, 3ನೇ ಬಸ್ ಸ್ಟಾಪ್, 10ನೇ ಕ್ರಾಸ್, ಟಿ.ಬಿ. ಬಡಾವಣೆ, ವಿದ್ಯಾನಗರ, ದಾವಣಗೆರೆ. 30x40 ಅಳತೆಯ (33 ಚದರ) 3 ಮಹಡಿ ಮನೆ ಮಾರಾಟಕ್ಕಿದೆ.
95387 56409, 93410 21209


# ಹರಿಹರದಲ್ಲಿ ಶೀಘ್ರ ಆಕ್ಸಿಜನ್ ಪ್ಲಾಂಟ್ : ಜಿಲ್ಲಾಧಿಕಾರಿ

ಹರಿಹರ, ಜೂ.19- ಕೆಲವೇ ದಿನಗಳಲ್ಲಿ ನಗರದ ಸಾರ್ವಜನಿಕರ ಆಸ್ಪತ್ರೆಯ ಆವರಣದಲ್ಲಿ ಇರುವ ಆಕ್ಸಿಜನ್ ಪ್ಲಾಂಟ್ ಕಾರ್ಯಾರಂಭ ಮಾಡಲಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

ಇಲ್ಲಿನ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ಜಿ.ಎಂ. ಸಿದ್ದೇಶ್ವರ ಅವರ ಕುಟುಂಬದ ವತಿಯಿಂದ ನಿರ್ಮಾಣವಾಗುತ್ತಿರುವ ಆಕ್ಸಿಜನ್ ಪ್ಲಾಂಟ್ ಕಾಮಗಾರಿಯನ್ನು ಇಂದು ವೀಕ್ಷಣೆ ಮಾಡಿದ ಸಂದರ್ಭದಲ್ಲಿ ತಮ್ಮನ್ನು ಭೇಟಿಯಾದ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

ಈಗಾಗಲೇ ಆಕ್ಸಿಜನ್ ಯಂತ್ರಗಳು ಮಧ್ಯಪ್ರದೇಶವನ್ನು ತಲುಪಿದ್ದು, ನಾಲ್ಕೈದು ದಿನಗಳಲ್ಲಿ ಹರಿಹರ ನಗರವನ್ನು ತಲುಪುವ



ನಿರೀಕ್ಷೆ ಮಾಡಲಾಗಿದೆ. ಇಲ್ಲಿ ಆಕ್ಸಿಜನ್ ಪ್ಲಾಂಟ್ ನಿರ್ಮಾಣ ಮಾಡುವುದರಿಂದ ಕನಿಷ್ಠ ಪಕ್ಷ 70 ಕೊರೊನಾ ರೋಗಿಗಳಿಗೆ ಚಿಕಿತ್ಸೆ ಭರಿಸಲು ಸಹಾಯವಾಗಲಿದೆ ಎಂದರು.

ಹರಿಹರ ತಾಲ್ಲೂಕಿನಲ್ಲಿ ಮತ್ತು ನಗರ ಪ್ರದೇಶಗಳಲ್ಲಿ ಸೇರಿ ಇಂದು ಸಕ್ರಿಯ ಕೊರೊನಾ ಸೋಂಕಿತರ ಸಂಖ್ಯೆ 56 ಇರುವುದರಿಂದ ಎಸ್‌ಜೆವಿಪಿ ಕಾಲೇಜು, ಹಾಸ್ಟೆಲ್ ಮತ್ತು ಕೊಂಡಜ್ಜಿ ಕೋವಿಡ್ ಕೇರ್ ಸೆಂಟರ್ ತಾತ್ಕಾಲಿಕವಾಗಿ ಸ್ಥಗಿತಗೊಳಿಸಿ, ಗುತ್ತೂರು ಬಳಿ ಇರುವ ಕೋವಿಡ್ ಕೇರ್ ಸೆಂಟರ್ ಮತ್ತು ಸಾರ್ವಜನಿಕ ಆಸ್ಪತ್ರೆಯಲ್ಲಿ ಕೊರೊನಾ ಸೋಂಕಿತರಿಗೆ ಚಿಕಿತ್ಸೆ ನೀಡಲಾಗುತ್ತದೆ ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಿಷ್ಯಂತ್ ಮಾತನಾಡಿ, ನಗರದಲ್ಲಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಇರುವ ಚೆಕ್ ಪೋಸ್ಟ್ ಗಳನ್ನು ಮತ್ತಷ್ಟು ಬಿಗಿಗೊಳಿಸಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಸಿಪಿಐ ಸತೀಶ್ ಕುಮಾರ್, ಪಿಎಸ್‌ಐ ಸುನೀಲ್ ಬಸವರಾಜ್ ತೆಲಿ, ಆರೋಗ್ಯ ಅಧಿಕಾರಿಗಳಾದ ಡಾ. ಹನುಮಾನಾಯ್ಕ್, ಡಾ ಚಂದ್ರಮೋಹನ್, ಶೋಭಾ ದೊಡ್ಡಮನಿ ಇತರರು ಹಾಜರಿದ್ದರು.

# ಮಾನವೀಯ ಮೌಲ್ಯಗಳ ಪುನರುತ್ಥಾನಕ್ಕೆ ಆತಂಕ

### ಜಗಳೂರಿನ ಕಾರ್ಯಕ್ರಮದಲ್ಲಿ ಎಚ್.ಕೆ. ವಿವೇಕ್ ಅಭಿಮತ

ಜಗಳೂರು, ಜೂ.19- ಹಣ, ಅಧಿಕಾರ, ಪ್ರಚಾರಗಳಿಂದ ಮಾನವೀಯ ಮೌಲ್ಯಗಳ ಪುನರುತ್ಥಾನಕ್ಕೆ ಆತಂಕ ಎದುರಾಗಿದೆ ಎಂದು ಜ್ಞಾನಭಿಕ್ಷಾ ಪಾದಯಾತ್ರಿ ಎಚ್.ಕೆ. ವಿವೇಕ್ ಕಳವಳ ವ್ಯಕ್ತಪಡಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಿನ್ನೆ ಜ್ಞಾನಭಿಕ್ಷೆ ಪಾದಯಾತ್ರೆ ಕುರಿತು ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಉತ್ತರ ದಿಕ್ಕಿನ ತುಟ್ಟತುದಿ ಬೀದರ್ ಜಿಲ್ಲೆ ಔರಾದ್ ತಾಲ್ಲೂಕಿನಿಂದ ಆರಂಭವಾದ ಪಾದಯಾತ್ರೆ, ರಾಜ್ಯದ 240 ತಾಲ್ಲೂಕುಗಳಲ್ಲಿ 12 ಸಾವಿರ ಕಿ.ಮೀ. ದೂರದವರೆಗೆ ಸಂಪೂರ್ಣ ಕಾಲ್ನಡಿಗೆ ಮೂಲಕ ಸಂಚರಿಸಿ ದಕ್ಷಿಣ ಭಾಗದ ಚಾಮರಾಜ ನಗರ ಜಿಲ್ಲೆಗೆ ತಲುಪುವ ಸಂಕಲ್ಪವಾಗಿದೆ ಎಂದು ಅವರು ತಿಳಿಸಿದರು.

ಕಳೆದ 6 ವರ್ಷಗಳಿಂದ ಯಾವುದೇ ವ್ಯವಹಾರಿಕ ಜಗತ್ತಿನಲ್ಲಿಲ್ಲದೆ ಸಾಮಾಜಿಕ ಜಾಲತಾಣಗಳಲ್ಲಿ ಬರವಣಿಗೆ ಮೂಲಕ ಜಾತಿ, ಧರ್ಮ ಎಲ್ಲೆ



ಮೀರಿ ಸಂಘ - ಸಂಸ್ಥೆ ಹೊರತುಪಡಿಸಿ, ಸ್ವಯಂ ಪ್ರೇರಿತನಾಗಿ ಹಣದ ನಿರೀಕ್ಷೆ, ಫಲಾಪೇಕ್ಷೆಯಿಲ್ಲದೆ ರಾಜ್ಯವ್ಯಾಪಿ ಮಾನವೀಯ ಮೌಲ್ಯಗಳ ಕುರಿತು ಶಾಲಾ - ಕಾಲೇಜುಗಳಲ್ಲಿ ಸಂವಾದಗಳನ್ನು ನಡೆಸುತ್ತಾ, ಜನ ಸಮೂಹದ ಮಧ್ಯೆ ವಿಷಯಗಳ ಮಂಡನೆ ಮಾಡುತ್ತಾ ತಾನು ಸಾಗಿದ್ದೇನೆ. ಮನುಷ್ಯನ ಸಣ್ಣ ಮನಸ್ಸುಗಳ ಪರಿವರ್ತನೆ, ಅಂತರಂಗದ ಚಳುವಳಿಯ ಗುರಿ ನನ್ನ ಸಂಕಲ್ಪವಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸಮಾಜದ 5 ಅಗ್ರಸ್ಥಾನಗಳಲ್ಲಿರುವ ಕ್ರಮಾನುಗತವಾಗಿ ತುತ್ತತುದಿಯಲ್ಲಿರುವ ರಾಜಕೀಯ ವ್ಯವಸ್ಥೆ, ಸರಕಾರಿ ಅಧಿಕಾರಿಗಳು, ಮಾಧ್ಯಮ, ಮಠಾಧೀಶರು, ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಗಳಲ್ಲಿ ಮೌಲ್ಯಗಳು, ಸಂಪನ್ಮೂಲ, ಬುದ್ಧಿವಂತಿಕೆ ಅಡಗಿದೆ. ಭವಿಷ್ಯದಲ್ಲಿ ಪರಿವರ್ತನೆಗೊಳಿಸುವ ಜವಾಬ್ದಾರಿಯಾಗಬೇಕಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ನಿವೃತ್ತ ಪ್ರೊಫೆಸರ್ ಡಾ. ಹನುಮಂತಪ್ಪ, ಲೀಡ್ ಬ್ಯಾಂಕ್ ನಿವೃತ್ತ ವ್ಯವಸ್ಥಾಪಕ ಎನ್.ಟಿ.ಯರ‍್ರಿಸ್ವಾಮಿ, ಕಾರ್ಯನಿರತ ಪತ್ರಕರ್ತರ ಸಂಘದ ತಾಲ್ಲೂಕು ಅಧ್ಯಕ್ಷ ಜಿ.ಎಸ್. ಚಿದಾನಂದಪ್ಪ, ಕಸಾಪ ತಾಲ್ಲೂಕು ಅಧ್ಯಕ್ಷ ಹಜರತ್ ಅಲಿ, ಆರ್‌ಟಿಐ ಕಾರ್ಯಕರ್ತ ವಿನಯ್, ಸುಜಾತ ಇನ್ನಿತರರು ಹಾಜರಿದ್ದರು.

# ಪಾಸಿಟಿವಿಟಿ ಸಾಲಿನಲ್ಲಿ ಜಿಲ್ಲೆ

(1ನೇ ಪುಟದಿಂದ) ಎಂದು ಹೊಸ ವಿನಾಯಿತಿ ನೀಡಲಾಗಿದೆ. ಹೋಟೆಲ್, ಕ್ಲಬ್, ರೆಸ್ಟೋರೆಂಟ್‌ಗಳು ಸಂಜೆ 5ರ ವರೆಗೆ ಕಾರ್ಯ ನಿರ್ವಹಿಸಲು, ಬಸ್ ಮತ್ತು ಮೆಟ್ರೋಗಳು ಶೇ.50ರ ಸಾಮರ್ಥ್ಯದಲ್ಲಿ ಕಾರ್ಯ ನಿರ್ವಹಿಸಲು ಅನುಮತಿ ನೀಡಲಾಗಿದೆ.

ಲಾಡ್ಜ್ ಮತ್ತು ರೆಸಾರ್ಟ್ ತೆರೆಯಲು ಹಾಗೂ ಜಿಮ್‌ಗಳು ಶೇ.50ರ ಸಾಮರ್ಥ್ಯದಲ್ಲಿ ಕಾರ್ಯ ನಿರ್ವಹಿಸಲು ಅವಕಾಶ ಕಲ್ಪಿಸಲಾಗಿದೆ.

ಆದರೆ, ಶೇ.10ಕ್ಕಿಂತ ಹೆಚ್ಚು ಪಾಸಿಟಿವಿಟಿ ದರ ಇರುವ ಮೈಸೂರು ಜಿಲ್ಲೆಯಲ್ಲಿ ಯಥಾಸ್ಥಿತಿಯ ನಿರ್ಬಂಧಗಳನ್ನು ಮುಂದುವರೆಸಲಾಗಿದೆ.



# ಶ್ರೀಗಳು ಪ್ರಬುದ್ಧ ಚಿಂತಕರು

(1ನೇ ಪುಟದಿಂದ) ಶ್ರೀಗಳು ಆರೋಗ್ಯ, ಪರಿಸರ, ನೀರು ಮತ್ತು ರೈತರ ಬಗ್ಗೆ ಅತಿ ಹೆಚ್ಚು ಚಿಂತನೆ ಮಾಡುವ ಶ್ರೇಷ್ಠ ಚಿಂತಕರು ಕೂಡ ಆಗಿದ್ದಾರೆ ಎಂದರು.

ರಾಜ್ಯದ ಗ್ರಾಮೀಣ ಭಾಗದಲ್ಲಿ ಬತ್ತಿ ಹೋಗಿರುವ ಕೆರೆಗಳಿಗೆ ನೀರು ತುಂಬಿಸುವ ಮಹತ್ ಕಾರ್ಯವನ್ನು ಅತ್ಯಂತ ಯಶಸ್ವಿಯಾಗಿ ಬೃಹತ್ ಆಂದೋಲನದ ರೀತಿಯಲ್ಲಿ ಮಾಡುತ್ತಿರುವುದು ಇಂದಿನ ಯುವ ಜನರಿಗೆ, ಸಂಘ-ಸಂಸ್ಥೆಗಳಿಗೆ ಸ್ಫೂರ್ತಿ ಮತ್ತು ಪ್ರೇರಣೆ ತರುವಂತದ್ದಾಗಿದೆ ಎಂದು ಹೇಳಿದರು.

ತರಳಬಾಳು ಜಗದ್ಗುರುಗಳ ಮಾರ್ಗದರ್ಶನದಲ್ಲಿ ಸತತವಾಗಿ 50 ದಿನಗಳ ಕಾಲ ಅನ್ನ ದಾಸೋಹ ಸೇವೆಯಲ್ಲಿ ತೊಡಗಿರುವ ತರಳಬಾಳು ಸೇವಾ ಸಮಿತಿ ಮತ್ತು ಶಿವಸೈನ್ಯ ತಂಡದ ಕಾರ್ಯದ ಬಗ್ಗೆ ಸಚಿವರು ಮೆಚ್ಚುಗೆ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ಮೇಯರ್ ಎಸ್.ಟಿ. ವೀರೇಶ್, ತರಳಬಾಳು ಸೇವಾ ಸಮಿತಿ ಪದಾಧಿಕಾರಿಗಳಾದ ಶಶಿಧರ ಹೆಮ್ಮನಬೇತೂರು, ಮಾಗನೂರು ಉಮೇಶ್ ಗೌಡ್ರು, ಶ್ರೀನಿವಾಸ ಮೆಳ್ಳೇಕಟ್ಟೆ, ಪ್ರಭು ಕಾವಲಹಳ್ಳಿ, ಲಿಂಗರಾಜ್ ಅಗಸನಕಟ್ಟೆ, ಸತೀಶ್ ಸಿರಿಗೆರೆ, ಶಿವಕುಮಾರ್ ಕೊರಟಿಗೆರೆ, ಧನ್ಯಕುಮಾರ್ ಎಲೆಬೇತೂರು ಮತ್ತಿತರರಿದ್ದರು.

# ಚಿತ್ರದುರ್ಗದಲ್ಲಿ ಮೊದಲ ಬಾರಿ ಬ್ಲ್ಯಾಕ್ ಫಂಗಸ್ ಕೇಸ್

ಚಿತ್ರದುರ್ಗ, ಜೂ.19- ನಗರದ ಎಸ್.ಜೆ.ಎಂ. ದಂತ ಮಹಾವಿದ್ಯಾಲಯದಲ್ಲಿ ಒಂದು ಬ್ಲ್ಯಾಕ್ ಫಂಗಸ್ ಕೇಸ್ ಪತ್ತೆಯಾಗಿದೆ. ಹಲ್ಲು ನೋವಿನಿಂದ ಬಳಲುತ್ತಿದ್ದ ರೋಗಿಯನ್ನು ತಪಾಸಣೆ ಮಾಡಿದ ಮುಖ, ದವಡೆ ಮತ್ತು ಬಾಯಿ ಶಸ್ತ್ರಚಿಕಿತ್ಸೆ ವಿಭಾಗದ ಮುಖ್ಯಸ್ಥ ಡಾ|| ನಾಗರಾಜಪ್ಪ, ಡಾ|| ತನ್ವೀರ್ ಅಹಮದ್ ಮತ್ತು ಡಾ|| ಮಧುಮತಿ ಇದು ಬ್ಲ್ಯಾಕ್ ಫಂಗಸ್ ಕೇಸ್ ಎಂದು ಪತ್ತೆ ಹಚ್ಚಿದ್ದಾರೆ. ಚಿತ್ರದುರ್ಗದಲ್ಲಿ ಮೊದಲ ಬಾರಿ ಕಾಣಿಸಿಕೊಂಡ ಈ ರೋಗಿಗೆ ವೈದ್ಯರ ತಂಡವು ಬಸವೇಶ್ವರ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ನೀಡಲಿದ್ದಾರೆ ಎಂದು ಕಾಲೇಜಿನ ಪ್ರಾಂಶುಪಾಲರಾದ ಡಾ|| ಗೌರಮ್ಮ ತಿಳಿಸಿದರು.

# 3ನೇ ಅಲೆಯ ಎಚ್ಚರಿಕೆ !

(1ನೇ ಪುಟದಿಂದ) ಗಣನೀಯ ಪ್ರಮಾಣದ ಜನ ಸಮುದಾಯಕ್ಕೆ ಲಸಿಕೆ ಸಿಗುವವರೆಗೂ ಕೊರೊನಾ ತಡೆಗಾಗಿ ಎಚ್ಚರಿಕೆ ವಹಿಸಬೇಕಿದೆ ಎಂದವರು ಹೇಳಿದ್ದಾರೆ.ಮೂರನೇ ಕೊರೊನಾ ಅಲೆಯನ್ನು ತಪ್ಪಿಸಲಾಗದು. ಅದು ಸೆಪ್ಟೆಂಬರ್ - ಅಕ್ಟೋಬರ್ ಅವಧಿಯಲ್ಲಿ ಬರಬಹುದು ಎಂದು ಹಲವಾರು ತಜ್ಞ ಪರಿಣಿತರು ಈ ಹಿಂದೆ ಹೇಳಿದ್ದರು.

# ಕೊರೊನಾ ಸಂಕಷ್ಟದಲ್ಲಿ ಸಿರಿಗೆರೆ ಮಠದ ಭಕ್ತರ ಪುಣ್ಯದ ಕೆಲಸ

ಹರಿಹರ, ಜೂ.19- ಶ್ರೀ ತರಳಬಾಳು ಯುವಕ ಸಂಘ, ಶ್ರೀ ತರಳಬಾಳು ಮಹಿಳಾ ಸಂಘ, ಶ್ರೀ ತರಳಬಾಳು ಸೇವಾ ಸಮಿತಿ ಮತ್ತು ತಾಲ್ಲೂಕು ಸಾಧು ವೀರಶೈವ ಸಮಾಜ ಇವರುಗಳ ಸಂಯುಕ್ತಾಶ್ರಯದಲ್ಲಿ ನಗರದಲ್ಲಿ ನಡೆಯುತ್ತಿರುವ ದಾಸೋಹ ಸೇವೆ ಮುಂದುವರೆದಿದೆ.

ಸರ್ಕಾರಿ ಆಸ್ಪತ್ರೆಯಲ್ಲಿರುವ ಕೊರೊನಾ ಸೋಂಕಿತರು, ಅವರ ಪರಿಚಾರಕರು ಹಾಗೂ ಕೊರೊನಾ ವಾರಿಯರ್ಸ್‌ಗಳಿಗೆ ಪ್ರತಿ ನಿತ್ಯ ಮಧ್ಯಾಹ್ನ ಊಟ ನೀಡುತ್ತಾ ಬಂದಿದ್ದು, 31ನೇ ದಿನ ಕೈಗಾರಿಕೋದ್ಯಮಿ ಎಸ್.ಎಸ್. ಗಣೇಶ್ ಮತ್ತು ಮಲೇಬೆನ್ನೂರಿನ ಸಿರಿಗೆರೆ ರಾಜಣ್ಣ ದಾಸೋಹ ದಾನಿಗಳಾಗಿದ್ದರು.

32ನೇ ದಿನದಂದು ಯಲವಟ್ಟಿಯ ಹೆಚ್.ಎಂ. ಗಜೇಂದ್ರ ಮತ್ತು ಸಂಕಪ್ಪರ ಸಿದ್ದಪ್ಪ, ಗುತ್ತಿಗೆದಾರ ಹನಗವಾಡಿಯ ರೇವಣಸಿದ್ದೇಶ್ ಅವರು ದಾಸೋಹದ ವ್ಯವಸ್ಥೆ



### ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಮೆಚ್ಚುಗೆ

ಮಾಡಿದ್ದರು.

ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಊಟ ವಿತರಣೆಗೆ ಚಾಲನೆ ನೀಡಿದ ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಮಾತನಾಡಿ, ಕೊರೊನಾ ಸಂದರ್ಭದಲ್ಲಿ ಸಿರಿಗೆರೆ ಮಠದ ಭಕ್ತರು ಹರಿಹರ, ದಾವಣಗೆರೆ, ಚಿತ್ರದುರ್ಗ ಸೇರಿದಂತೆ, ಅನೇಕ ಕಡೆ ಪ್ರತಿನಿತ್ಯ ದಾಸೋಹ ವ್ಯವಸ್ಥೆ ಮಾಡಿರುವುದು ಸುತ್ತಾರ್ಹ ಕಾರ್ಯವಾಗಿದೆ ಎಂದು ಶ್ಲಾಘಿಸಿದರು.


ತರಳಬಾಳು ಯುವಕ ಸಂಘದ ಅಧ್ಯಕ್ಷ ಕೊಂಡಜ್ಜಿ ವೀರಣ್ಣ ಮಾತನಾಡಿದರು.

ಜಿ.ಪಂ. ಮಾಜಿ ಸದಸ್ಯರೂ ಆದ ವಕೀಲ ಎಂ. ನಾಗೇಂದ್ರಪ್ಪ, ಸರ್ಕಲ್ ಇನ್‌ಸ್ಪೆಕ್ಟರ್ ಸತೀಶ್, ಹಿರಿಯರಾದ ಕೆ.ಬಿ. ಮಂಜುನಾಥ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪಾರ್ವತಿ, ನಗರಸಭೆ ಸದಸ್ಯೆ ಅಶ್ವಿನಿ ಕೃಷ್ಣ ಪಾಲ್ಗೊಂಡಿದ್ದರು.

ತರಳಬಾಳು ಮಹಿಳಾ ಸಂಘದ ಅಧ್ಯಕ್ಷೆ ಬೆಳ್ಳೂಡಿ ಗೀತಮ್ಮ, ತರಳಬಾಳು ಸೇವಾ ಸಮಿತಿ ಅಧ್ಯಕ್ಷ ಕೊಂಡಜ್ಜಿ ಶಿವಕುಮಾರ್, ಕಿರಣ್ ಮೂಲಿಮನಿ, ನಾಗರಾಜ್ ಕೋಡಿಹಳ್ಳಿ, ಹುಲ್ಮನಿ ಉಮೇಶ್, ಮಹೇಶ್, ಪಿಗ್ಮಿ ವಿಜಯಕುಮಾರ್, ಹರಗನಹಳ್ಳಿ ಅಶೋಕ್, ಜಿ.ಎಂ. ವಸಂತ್, ಸುರೇಶ್ ಸ್ವಾಮಿ, ಪ್ರಭು, ಆಕಾಶ್, ಮಲ್ಲಿಕಾರ್ಜುನ್, ಅಮರಾವತಿ ಭರತ್, ನಾಗರಾಜ ಗೌಡ, ರಾಜು, ಪಾಲಾಕ್ಷಿ ಇನ್ನಿತರರು ಹಾಜರಿದ್ದರು.


|| ಶ್ರೀ ಮೈಲಾರಲಿಂಗೇಶ್ವರ ಪ್ರಸನ್ನ ||

**ಕೈಲಾಸ ಶಿವಗಣಾರಾಧನೆ ಆಹ್ವಾನ**



ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕು ಬೆಳಲಗೆರೆ ಗ್ರಾಮದ ವಾಸಿ
**ಸಂಕ್ಲೀಪುರದ ಚಿಂದಿಗೌಡ್ರ ಶ್ರೀಮತಿ ರತ್ನಮ್ಮ ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 13.06.2021ನೇ ಭಾನುವಾರ ಸಂಜೆ 07.28ಕ್ಕೆ ನನ್ನ ಪೂಜ್ಯ ಪತಿಯವರಾದ
**ಯಜಮಾನ್ ಸಂಕ್ಲೀಪುರದ ಚಿಂದಿಗೌಡ್ರ ಎಸ್.ಸೋಮಶೇಖರಪ್ಪನವರು**
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಶಿವಗಣಾರಾಧನೆ'ಯನ್ನು**
**ದಿನಾಂಕ : 21.06.2021ನೇ ಸೋಮವಾರ ಬೆಳಿಗ್ಗೆ 10.30ಕ್ಕೆ ಚನ್ನಗಿರಿ ತಾ|| ಬೆಳಲಗೆರೆ ಗ್ರಾಮದಲ್ಲಿರುವ ಮೃತರ ಸ್ವಗೃಹದಲ್ಲಿ** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : ಪತ್ನಿ : **ಶ್ರೀಮತಿ ರತ್ನಮ್ಮ**
**ಶ್ರೀ ಪ್ರಕಾಶಪ್ಪ ಎಸ್.**, ಸದಸ್ಯರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸೇವಾ ಸಂಘ
**ಡಾ. ಎಸ್. ಬಸವರಾಜಪ್ಪ**, ಪ್ರಾಧ್ಯಾಪಕರು, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾಲಯ,
**ಎಸ್. ಹಾಲೇಶಪ್ಪ**, ಮಾಜಿ ಅಧ್ಯಕ್ಷರು, ಎಸ್‌ಡಿಎಂಸಿ, ಸರ್ಕಾರಿ ಪ್ರೌಢಶಾಲೆ, ಬೆಳಲಗೆರೆ.,
**ಮಹಾಂತೇಶಪ್ಪ ಎಸ್.** ಶಿಕ್ಷಕರು, ಭದ್ರಾವತಿ. **ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಚಿಂದಿಗೌಡ್ರ ವಂಶಸ್ಥರು ಹಾಗೂ ಅಪಾರ ಬಂಧು-ಮಿತ್ರರು**

**ಶಾಂತ ಮೂರ್ತಿ ನಿಧನ**



ದಾವಣಗೆರೆಯ ಹೊಂಡದ ಸರ್ಕಲ್ ಬಳಿಯ ನಿವಾಸಿ ದಿ. ಕೃಷ್ಣಮೂರ್ತಿ ಶೆಟ್ಟಿ ಅವರ ಪತ್ನಿ ಶ್ರೀಮತಿ ಶಾಂತ ಮೂರ್ತಿ (73) ಅವರು ದಿನಾಂಕ 19.06.2021ರ ಶನಿವಾರ ಬೆಳಿಗಿನಜಾವ 2 ಗಂಟೆ ಸಮಯದಲ್ಲಿ ನಿಧನರಾಗಿದ್ದಾರೆ. ಓರ್ವ ಪುತ್ರ, ಮೂವರು ಪುತ್ರಿಯರನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 19.6.2021ರ ಶನಿವಾರ ಮಧ್ಯಾಹ್ನ 2 ಗಂಟೆಗೆ ನಗರದ ಪಿ.ಬಿ. ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ನೆರವೇರಿಸಲಾಯಿತು.


**ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ**

**ನಾಟಿ ಕೋಳಿ ಮೊಟ್ಟೆ (RIR ಜಾತಿ)**
Organic Eggs Available
90082 03418
63645 96567

**ಉಚಿತವಾಗಿ ಭಾವಸಾರ ವಧು-ವರರ ಮಾಹಿತಿ**
ಭಾವಸಾರ ವಧು-ವರರ ಮಾಹಿತಿ ಉಚಿತವಾಗಿ ಪಡೆಯಲು ವಾಟ್ಸಾಪ್ ಗ್ರೂಪ್‌ಗೆ ಸದಸ್ಯರಾಗಿ ಸೌಲಭ್ಯ ಪಡೆಯಿರಿ.
ವಿವರಗಳಿಗೆ : ಪಾಂಡುರಂಗರಾವ್ ಎಸ್. ಜಿಂಗಾಡೆ, ವಿನೋಬನಗರ, 2ನೇ ಹಂತ, 60 ಅಡಿ ರಸ್ತೆ, 14ನೇ 'ಬಿ' ತಿರುವು, ಶಿವಮೊಗ್ಗ.
72047 76127, 94482 04861

**ಮನೆ ಬಾಡಿಗೆಗೆ ಇದೆ**
ಮಹಾಲಸ ನಿಲಯ 4ನೇ ಮೇನ್, 4ನೇ ಕ್ರಾಸ್, ವಿನೋಬನಗರ
Contact: 94488 73541
ಸುಬ್ಬರಾವ್ ವೆರ್ಣೇಕರ್
72598 76703


# ನಾಯಕ ವಂಶಸ್ಥ ರಾಜಣ್ಣ ನಿಧನ



ಚಿತ್ರದುರ್ಗ, ಜೂ.19- ದೊಡ್ಡ ಮದಕರಿ ನಾಯಕ ವಂಶಸ್ಥರಾದ ಸಿ.ಪಿ. ರಾಜಣ್ಣ ಅವರು ಕೊರೊನಾದಿಂದ ಇಂದು ಬೆಳಿಗ್ಗೆ ಚಳ್ಳಕೆರೆ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ, ಇಬ್ಬರು ಮಕ್ಕಳನ್ನು ಅಗಲಿದ್ದು, ಚಳ್ಳಕೆರೆಯಲ್ಲಿ ಅಂತ್ಯಕ್ರಿಯೆ ನಡೆಯಿತು.

ಶ್ರೀ ಮುರುಘಾ ಮಠದೊಂದಿಗೆ ನಿರಂತರವಾಗಿ ಅವಿನಾಭಾವ ಭಕ್ತಿಯನ್ನು ಇಟ್ಟುಕೊಂಡಿದ್ದ ರಾಜಣ್ಣನವರ ನಿಧನಕ್ಕೆ ಡಾ. ಶಿವಮೂರ್ತಿ ಮುರುಘಾ ಶರಣರು ಸಂತಾಪ ವ್ಯಕ್ತಪಡಿಸಿದ್ದಾರೆ.

# ಪ್ರವಾಹ ಎದುರಿಸಲು ಸಿದ್ಧ : ಸಿಎಂ

(1ನೇ ಪುಟದಿಂದ) ತಕ್ಷಣ ಪಡೆದುಕೊಳ್ಳುವಂತೆ ಜಿಲ್ಲಾಡಳಿತಕ್ಕೆ ಸೂಚಿ ಸಿರುವುದಾಗಿ ತಿಳಿಸಿದರು.

ರಾಜ್ಯ ಮಟ್ಟದಲ್ಲಿ ಅಪರ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿ.ನಿ) ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಪ್ರತಿ 15 ದಿನಗಳಿಗೊಮ್ಮೆ ಋತುಮಾನ ಪರಿಸ್ಥಿತಿ ಅವಲೋಕನ ಸಭೆಗಳನ್ನು ಕೈಗೊಳ್ಳಲಾಗುತ್ತಿದೆ ಎಂದೂ ಅವರು ತಿಳಿಸಿದ್ದಾರೆ. ಇಂದಿನ ವಿಡಿಯೋ ಕಾನ್ಫರೆನ್ಸ್ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಿಗೆ ಈ ಕೆಳಗಿನ ಸೂಚನೆಗಳನ್ನು ನೀಡಲಾಯಿತು :

ಜಿಲ್ಲಾ ಮಟ್ಟದಲ್ಲಿ ಪ್ರವಾಹ ಪೀಡಿತ ಗ್ರಾಮಗಳನ್ನು ಗುರುತಿಸಿ, ಪ್ರವಾಹ ಪರಿಸ್ಥಿತಿ ಎದುರಿಸಲು ಸೂಕ್ತ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು.

ಜನ, ಜಾನುವಾರುಗಳ ರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ. ಇದರೊಂದಿಗೆ ಕೋವಿಡ್ 19 ಸೋಂಕಿನ ಕುರಿತು ಸಹ ಎಚ್ಚರಿಕೆ ವಹಿಸಬೇಕಿದೆ.

ಜಿಲ್ಲೆ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಸಹಾಯವಾಣಿ ಸ್ಥಾಪನೆ, ದೂರವಾಣಿ ಮತ್ತಿತರೆ ಸಂಪರ್ಕ ಸಾಧನಗಳನ್ನು ಸುಸ್ಥಿತಿಯಲ್ಲಿರಿಸಿಕೊಳ್ಳುವುದು ಹಾಗೂ ತುರ್ತು ನಿರ್ವಹಣೆಗೆ ಬೇಕಾದ ಸಾಮಗ್ರಿಗಳನ್ನು ಅಗತ್ಯಕ್ಕೆ ಅನುಗುಣವಾಗಿ ಖರೀದಿಸಲು ಕ್ರಮ ಕೈಗೊಳ್ಳುವುದು.

ಪ್ರವಾಹ ಸಂದರ್ಭದಲ್ಲಿ ಜನರ ರಕ್ಷಣೆ, ಅವರಿಗೆ ಅಗತ್ಯ ಮೂಲಸೌಕರ್ಯಗಳುಳ್ಳ ಕಾಳಜಿ ಕೇಂದ್ರಗಳು, ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲು ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳುವುದು ಅತಿ ಅಗತ್ಯ.

ಪ್ರವಾಹ ನಿರ್ವಹಣೆಗಾಗಿ ಸ್ಥಳೀಯ ಸಂಪನ್ಮೂಲಗಳ ಸದ್ಬಳಕೆ ಹಾಗೂ ಸ್ಥಳೀಯ ಸಂಘ-ಸಂಸ್ಥೆಗಳು, ಸ್ವಯಂ ಸೇವಕರ ಸಹಕಾರವನ್ನು ಪಡೆದುಕೊಳ್ಳುವುದು.

ಪ್ರವಾಹದ ಹಿನ್ನೆಲೆಯಲ್ಲಿ ಸ್ಥಳಾಂತರಿಸಿದ ಕೆಲವು ಗ್ರಾಮಗಳಿಗೆ ಗ್ರಾಮಸ್ಥರು ತೆರಳಲು ಹಿಂದೇಟು ಹಾಕುತ್ತಿದ್ದಾರೆ. ಈ ಗ್ರಾಮಸ್ಥರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಈ ಗ್ರಾಮಗಳಿಗೆ ಮೂಲಸೌಕರ್ಯ ಒದಗಿಸಿ, ಸ್ಥಳಾಂತರಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.


# ಸೋಂಕಿತರಿಗೆ ಇಂದು ಯೋಗ

ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ನಡೆಯುತ್ತಿರುವ ಕಾರ್ಯಕ್ರಮದಲ್ಲಿ ಕೋವಿಡ್ ಸೋಂಕಿತರಿಗೆ ಆರೋಗ್ಯ ಯೋಗ ಕಾರ್ಯಕ್ರಮವು ಇಂದು ಬೆಳಿಗ್ಗೆ 6 ಕ್ಕೆ ಕೋವಿಡ್ ಕೇರ್ ಸೆಂಟರ್‌ನಲ್ಲಿ ನಡೆಯಲಿದೆ.



ವಾಸವಿ ಗುರು ಪೀಠಂನ ದ್ವಿತೀಯ ಗುರುಗಳಾದ
ಪರಮಪೂಜ್ಯ ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಸರಸ್ವತಿ ಮಹಾಸ್ವಾಮಿಗಳ

# ಪೀಠಾರೋಹಣ ಮಹೋತ್ಸವ



## ಪೂಜ್ಯ ಶ್ರೀ ಶ್ರೀ ಶ್ರೀ
## ಸಚ್ಚಿದಾನಂದ ಸರಸ್ವತಿ ಸ್ವಾಮೀಜಿಯವರು

ಪೀಠಾರೋಹಣ ಸಮಾರಂಭವು
ದಿನಾಂಕ : 20-06-2021ರಂದು ಬೆಂಗಳೂರಿನಲ್ಲಿ
ಅತ್ಯಂತ ವಿಜೃಂಭಣೆಯಿಂದ ನೆರವೇರಲಿ
ಎಂದು ಮಾತೆ
ಶ್ರೀ ಕನ್ನಿಕಾಪರಮೇಶ್ವರಿ
ಅಮ್ಮನವರಲ್ಲಿ ಪ್ರಾರ್ಥಿಸುವ




Smt. Rajanahalli S. Hemalatha
Rajanahalli Srikar Punith
Smt. Rajanahalli Soumya Manasa
Chi. Sai Rishan
Master Bunny


**R.G. SRINIVASMURTHY**

President : Sri Kannika Parameshwari Co-op Bank Ltd., Davangere
Chairman : Guest House Bengaluru Karntaka Arya Vysya Maha Sabha
Director : Davangere District Central Co -op Bank Ltd.,
Joint Secretary : Sri Kannika Parameshwari Diamond Jubilee Vidya Peeta.
Working President : Davanagere District Seeds, Fertilizers & Pesticides Association.

Chairman
**R.G.S. GROUP OF FIRMS**



Rajanahalli. G. Srinivasamurthy & Associates (RGS & Associates )
Srinivasa Agencies
Srinivasa Enterprises
Srinivasa Honda
Srinivasa Dryer Rice Industries
Srinivasa Minerals & Chemicals
Srinivasa Warehousing Corporation
Srinivasa Recreations, Coco Palms Resorts-Maganahalli
RGS & Associates (NT Pete Bangalore)
C&F Parle Products, Asian Paints, Iffco Speciality Fertilizers
Storeage of Fertilizers, Honda Two Wheeler



Smt Bhagyalakshmi Manjunath
Shivaswaroop H.P.
Smt. Shimsha Shivaswaroop
Chi. Shriyank H.P. (boss)
And Family.

**Gundal Manjunath,**
President, Karnataka e-Governance Vendor Association.(R)
Chairman
**GUNDAL GROUP OF COMPANIES**



Gundal Business Data Solutions
Gundal Business Data Solutions Pvt. Ltd.,
Gundal Infotech Private Limited
Shimsha Foundation ®
Devanagari Sarees And Jewels
G-connect E Services
gm Business Data Solutions

# ರಾಶಿ ಭವಿಷ್ಯ

**ದಿನಾಂಕ : 20.06.2020 ರಿಂದ 26.06.2020**

**– ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ನೀವಾಗಿಯೇ ಸೃಷ್ಟಿಸಿಕೊಂಡ ಆರ್ಥಿಕ ಸುಳಿಯಿಂದ ಹೊರಬರಲು, ಅವರಿವರೊಂದಿಗೆ ಚರ್ಚಿಸದೇ ಹಿತೈಷಿಗಳಿಂದ ಮಾತ್ರ ಸಮಾಲೋಚಿಸಿದಲ್ಲಿ ಸಮಸ್ಯೆಗೆ ಪರಿಹಾರ ಕಂಡೀತು. ಪ್ರತಿಯೊಂದು ಕೂಡ ಯೋಜನಾಬದ್ಧವಾಗಿದ್ದಲ್ಲಿ ಮಾತ್ರ ಯಶಸ್ಸನ್ನು ಪಡೆಯಲು ಸಾಧ್ಯ. ಆಮದು ಮತ್ತು ರಫ್ತು ವಹಿವಾಟುದಾರರಿಗೆ ಹೆಚ್ಚಿನ ವ್ಯವಹಾರ ಕುದುರಲಿದೆ. ಅನಿರೀಕ್ಷಿತವಾಗಿ ದೊರೆಯುವ ಹಣಕಾಸಿನ ನೆರವು, ಅವಿವಾಹಿತರಿಗೆ ಕಂಕಣಭಾಗ್ಯ, ಉನ್ನತಾಧ್ಯಯನ ವಿದ್ಯಾರ್ಥಿಗಳು ಹೆಚ್ಚು ಶ್ರಮಪಟ್ಟಲ್ಲಿ ಮಾತ್ರ ಉತ್ತಮ ಫಲಿತಾಂಶ, ಹಿರಿಯರೊಂದಿಗಿದ್ದ ಮನಸ್ತಾಪ ದೂರವಾಗಿ ಬಾಂಧವ್ಯ ವೃದ್ಧಿಸಲಿದೆ, ಆರೋಗ್ಯವನ್ನು ಅಲಕ್ಷಿಸಬೇಡಿ, ಸಾಧ್ಯವಾದಲ್ಲಿ ಕುಲದೇವತಾರಾಧನೆ ಮಾಡಿ. ಭಾನು, ಸೋಮ, ಮಂಗಳ ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಸರ್ಕಾರಿ ನೌಕರರಿಗೆ ಇಷ್ಟರಲ್ಲೇ ಪದೋನ್ನತಿಯಾಗಲಿದೆ, ಎಲ್ಲವೂ ನಿಮ್ಮ ನಿರೀಕ್ಷೆಯಂತೆ ನಡೆಯುವುದು, ಅನಿರೀಕ್ಷಿತವಾಗಿ ಕೌಟುಂಬಿಕ ದೊಡ್ಡ ಜವಾಬ್ದಾರಿಯೊಂದು ಹೆಗಲೇರಲಿದೆ. ಶೃಂಗಾರ ಸಾಮಗ್ರಿಗಳ ವಹಿವಾಟು ಹೆಚ್ಚಿನ ಲಾಭವಾಗುವುದು. ವ್ಯಾಪಾರಗಳಲ್ಲಿ ಹೆಚ್ಚಿನ ಬಂಡವಾಳ ಹೂಡಲು ಹೋಗಬೇಡಿ. ತಜ್ಞ ವೈದ್ಯರಿಗೆ ದೇಶ-ವಿದೇಶಗಳಿಂದ ವಿಶೇಷಾಹ್ವಾನ ಬರುವುದು. ಆದಾಯದಲ್ಲಿ ವೃದ್ಧಿ ಕಂಡುಬರಲಿದ್ದು, ಸರಿಯಾದ ರೀತಿಯಲ್ಲಿ ವೆಚ್ಚ ಮಾಡುವುದು ಉತ್ತಮ. ದಾಯಾದಿ ಕಲಹಗಳನ್ನು ಸಾಧ್ಯವಾದಷ್ಟು ಬೇಗನೇ ಬಗೆಹರಿಸಿಕೊಳ್ಳಿ. ಪದವೀದರರಿಗೆ ಉತ್ತಮ ನೌಕರಿ ಸಿಗಲಿದೆ. ಬುಧ, ಶುಕ್ರ, ಶನಿ ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಙ, ಛ.ಕೆ.ಕೋ.ಹ.)**

ಹಿರಿಯರು ಕೊಡುವ ಹೊಣೆಗಾರಿಕೆಯನ್ನು ವಿನಮ್ರವಾಗಿ ಸ್ವೀಕರಿಸಿ, ರಚ್ಚೆ ಮಾಡುವ ಚಿಕ್ಕಮಕ್ಕಳನ್ನು ದಂಡಿಸಿ ಜೊತೆಗೆ ಅವರ ಪೋಷಕರ ಕೋಪಕ್ಕೆ ಗುರಿಯಾಗುವಿರಿ. ಹೆಂಡತಿಯ ತವರುಮನೆಯವರು ಕೊಡುವ ಸಹಾಯವನ್ನು ತೆಗೆದುಕೊಳ್ಳಲು ಬಿಗುಮಾನಬೇಡ. ಹೊಸಮನೆ ಕಟ್ಟುವ ಅಥವಾ ಕೊಳ್ಳಲು ಸಕಾಲ, ವ್ಯವಹಾರದಲ್ಲಿ ಬಂಡವಾಳ ಹೂಡುವ ಮೊದಲು ಅದರ ಪೂರ್ವಾಪರಗಳ ಬಗ್ಗೆ ಸರಿಯಾಗಿ ತಿಳಿದುಕೊಳ್ಳುವುದು ಲೇಸು. ಲೇವಾದೇವಿ ವ್ಯವಹಾರವನ್ನು ಕೆಲಕಾಲ ನಿಲ್ಲಿಸುವುದು ಕ್ಷೇಮ. ಹಣಕಾಸಿನ ಸ್ಥಿತಿ ಸಾಧಾರಣ, ಖರ್ಚುವೆಚ್ಚಗಳ ಮೇಲೆ ಹಿಡಿತವಿರಲಿ, ಗುರುಗಳ ಸೇವೆ ಮಾಡಿ. ಮಂಗಳ-ಬುಧ-ಗುರು-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಸರ್ಕಾರದ ಉನ್ನತಾಧಿಕಾರಿಗಳಿಗೆ ತಮ್ಮದಲ್ಲದ ತಪ್ಪಿಗೆ ಹೊಂದಿದ್ದ ಆಪಾದನೆಗಳು ದೂರವಾಗಲಿವೆ. ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುವವರಿಗೆ ಪದೋನ್ನತಿಯೊಂದಿಗೆ ವೇತನದಲ್ಲಿ ಹೆಚ್ಚಳವಾಗಲಿದೆ. ಆಡುವ ಮಾತಿನಲ್ಲಿ ನಯವಿನಯವಿದ್ದಲ್ಲಿ ಮಾತ್ರ ಕೆಲಸದ ಒಟ್ಟಿಗೆ ಹಮ್ಮಿಕೊಂಡಿದ್ದ ಮತ್ತೊಂದು ವ್ಯವಹಾರವು ಲಾಭವನ್ನು ತರುವುದು. ಪ್ರಾಯಕ್ಕೆ ಬಂದ ಮಕ್ಕಳ ನಡಾವಳಿಯಲ್ಲಿ ಕಂಡುಬಂದ ವ್ಯತ್ಯಾಸ ಮನಸ್ಸಿಗೆ ಬೇಸರವನ್ನುಂಟುಮಾಡಬಹುದು. ವಿದ್ಯಾರ್ಥಿಗಳು ಅವರಿವರ ಮಾತುಗಳಿಗೆ ಮೋಸ ಹೋಗಿ, ತಮ್ಮ ಉತ್ತಮ ಭವಿಷ್ಯವನ್ನೇ ಹಾಳು ಮಾಡಿಕೊಳ್ಳುವ ಸಂಭವವಿದೆ. ಗುರುತು, ಪರಿಚಯವಿಲ್ಲದವರೊಂದಿಗೆ ಹಣಕಾಸಿನ ವ್ಯವಹಾರ ಮಾಡಿದರೆ ಭಾರೀ ನಷ್ಟ. ಮಡದಿಯ ಆರೋಗ್ಯದಲ್ಲಿ ತುಸು ವ್ಯತ್ಯಾಸ. ಸೋಮ, ಗುರು, ಶುಕ್ರ, ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಆರಂಭಿಸಿದ ಹೊಸ ಯೋಜನೆಯೊಂದರಿಂದ ಅನಿರೀಕ್ಷಿತವಾಗಿ ಹೆಚ್ಚು ಲಾಭ. ಅನಾವಶ್ಯಕ ಹಾಳು ಹರಟೆಗಳಲ್ಲಿ ತೊಡಗುವುದರಿಂದ ಅಮೂಲ್ಯ ಸಮಯವು ವ್ಯರ್ಥವಾಗುವುದು, ಕುಟುಂಬದ ಒಗ್ಗಟ್ಟವನ್ನು ಕಂಡು ಸಹಿಸದವರು ಪಿತೂರಿ ಮಾಡಬಹುದು. ಹಿರಿಯರು ಹೊತ್ತಿರುವ ಹರಕೆಗಳನ್ನು ಪೂರೈಸಿ, ವ್ಯಾಪಾರಿಗಳಿಗೆ ಗ್ರಾಹಕರಿಂದ ಕಿರಿಕಿರಿ, ಸಾಧ್ಯವಾದಷ್ಟು ಸೌಜನ್ಯದಿಂದ ವರ್ತಿಸಿ, ಆಡುವ ಮಾತಿನಲ್ಲಿ ಒರಟುತನಬೇಡ. ಕ್ರೀಡಾಪಟುಗಳಿಗೆ ಉತ್ತಮ ತರಬೇತುದಾರರು ದೊರೆಯದೆ, ಮೂಳೆ ಮುರಿತ, ಉಳುಕು ಸಮಸ್ಯೆಗಳು ಎದುರಾಗಬಹುದು. ಪ್ರಾಣಿಗಳಿಗೆ ನೀರು, ಆಹಾರ ಕೊಡಿರಿ. ಆರ್ಥಿಕ ಪರಿಸ್ಥಿತಿ ಸಾಧಾರಣ. ಭಾನು, ಸೋಮ, ಬುಧ, ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಕೌಟುಂಬಿಕ ವಿವಾದಗಳು ಇತ್ಯರ್ಥವಾಗಿ ಮನಸ್ಸಿಗೆ ನೆಮ್ಮದಿ ಮೂಡಲಿದೆ, ಖಾಸಗಿ ವೃತ್ತಿ ಜೀವನದಲ್ಲಿ ವರ್ಗಾವರ್ಗಿಯಾಗುವ ಸಂಭವವಿದೆ, ಬೇರೆಯವರ ವೈಯಕ್ತಿಕ ವಿಚಾರದಲ್ಲಿ ನಿಮ್ಮ ಪ್ರವೇಶ ಬೇಡ. ನಿಂದಾಸ್ತುತಿಗಳನ್ನು ಸಮಾನವಾಗಿ ಸ್ವೀಕರಿಸುವುದನ್ನು ಕಲಿಯಿರಿ. ಚಿನ್ನಾಭರಣ ವ್ಯಾಪಾರಿಗಳಿಗೆ ವಹಿವಾಟು ಹೆಚ್ಚಲಿದೆ. ಅವಶ್ಯಕತೆಗಿಂತ ಹೆಚ್ಚಾಗಿ ಮತ್ತ್ಯಾರಿಗೋ ನೆರವಾಗಲು ಹೆಚ್ಚಿನ ಸಾಲ ಬೇಡ. ಹಿರಿಯರ ವಿಚಾರದಲ್ಲಿ ಉದಾಸೀನರಾಗಬೇಡಿ. ನಿಶ್ಚಿತವಾಗಿದ್ದ ಮದುವೆ ಮಾತುಕತೆ ಮುಂದೆ ಹೋಗಲಿದೆ. ಸ್ನೇಹಿತರೊಂದಿಗೆ ವಿನಾಕಾರಣ ವಾಗ್ವಾದಬೇಡ. ನಿರುದ್ಯೋಗಿಗಳಿಗೆ ಸಾಧಾರಣ ವೇತನದ ನೌಕರಿ, ವಾಹನಗಳಲ್ಲಿ ಎಚ್ಚರ, ಗುರುಗಳ ಅನುಗ್ರಹ ಸಂಪಾದಿಸಲು ಯತ್ನಿಸಿ. ಮಂಗಳ, ಬುಧ, ಶುಕ್ರ, ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ರಾಜಕಾರಣಿಗಳೊಂದಿಗೆ ಒಡನಾಟ ಹೆಚ್ಚಾಗಲಿದೆ. ಯಾವುದೇ ಆಗಲಿ ಅತಿಯಾದರೆ ಕಷ್ಟ. ಶಿಕ್ಷಣ ಕ್ಷೇತ್ರದಲ್ಲಿರುವ ಅಧ್ಯಾಪಕರಿಗೆ ಗೌರವ ಸಮರ್ಪಣೆ, ರಾಜಕೀಯ ರಂಗದಲ್ಲೊಂದು ಬಿರುಗಾಳಿ, ನೆರೆಹೊರೆಯವರಿಗೆ ಸಹಾಯ ಮಾಡುತ್ತಾ ಅವರ ವಿಶ್ವಾಸ ಗೆಲ್ಲುವಿರಿ. ಕುಟುಂಬಕ್ಕೆ ಬರಬಹುದಾಗಿದ್ದ ದೊಡ್ಡ ಗಂಡಾಂತರವೊಂದು ತಾನಾಗಿಯೇ ಪರಿಹಾರವಾಗಲಿದೆ. ಸಾಧ್ಯವಾದಷ್ಟು ಚಿಕ್ಕಮಕ್ಕಳ ಚಟುವಟಿಕೆ ಮೇಲೆ ನಿಗಾವಹಿಸಿ, ಹಿರಿಯರ ಜೀವನಾನುಭವದಿಂದ ನೀತಿ ಪಾಠ ಕಲಿಯುವುದು ಬುದ್ಧಿವಂತರ ಲಕ್ಷಣ. ಶುಭ ಕಾರ್ಯಗಳನ್ನು ಮುಂದೂಡುವುದು ಉತ್ತಮ. ಅತಿಯಾದ ದೇಹಾಲಸ್ಯ, ವೈದ್ಯರ ಸಂಪರ್ಕದಲ್ಲಿರುವುದು ಉತ್ತಮ. ಸೋಮ, ಶುಕ್ರ, ಶನಿ, ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ವೃತ್ತಿಗೆ ಬಂದಿದ್ದ ಅಡಚಣೆಗಳು ನಿವಾರಣೆಯಾಗಲಿವೆ, ಪ್ರಾಯಕ್ಕೆ ಬಂದ ಮಕ್ಕಳನ್ನು ನಿಮ್ಮೊಂದಿಗೆ ವೃತ್ತಿಯಲ್ಲಿ ತೊಡಗಿಸಿಕೊಳ್ಳಿ, ದುಡ್ಡುಕಾಸಿನ ವಿಚಾರದಲ್ಲಿ ಕಟ್ಟುನಿಟ್ಟಾಗಿರಿ, ಆರಂಭಿಸಿರುವ ಮನೆ ರಿಪೇರಿ ಕೆಲಸಗಳು ನಿರಾತಂಕವಾಗಿ ಮುನ್ನಡೆಯಲಿವೆ. ರಾಜಕಾರಣಿಗಳ ಮಾತು ಅಥವಾ ಅವರ ಬೆಂಬಲವನ್ನು ನಂಬಿ ಯಾವುದೇ ಕೆಲಸಗಳನ್ನು ಮಾಡಬೇಡಿ. ಸಾಹಿತಿಗಳ ಕೃತಿಗಳಿಗೆ ಬೇಡಿಕೆ ಹೆಚ್ಚಲಿದೆ. ಖಾಸಗಿ ಕಂಪನಿಯಲ್ಲಿರುವ ಉನ್ನತಾಧಿಕಾರಿಗಳಿಗೆ ಪದೋನ್ನತಿಯೊಂದಿಗೆ ವೇತನದಲ್ಲಿ ಹೆಚ್ಚಳವಾಗಲಿದೆ. ಮಗಳ ಮದುವೆ ವಿಚಾರದಲ್ಲಿ ಅವಸರದ ನಿರ್ಧಾರಬೇಡ. ಹೈನುಗಾರಿಕೆ ಸದ್ಯದ ಪರಿಸ್ಥಿತಿಯಲ್ಲಿ ಅಷ್ಟು ಲಾಭದಾಯಕವಲ್ಲ. ಗುರುಗಳ ಅನುಗ್ರಹ ಸಂಪಾದಿಸಲು ಯತ್ನಿಸಿ. ಭಾನು, ಮಂಗಳ, ಗುರು, ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ರೈತಾಪಿ ಮಿತ್ರರಿಗೆ ಬಿಡುವಿಲ್ಲದ ಕೆಲಸ, ಆಭರಣ ತಯಾರಕರ ಸರಕುಗಳಿಗೆ ಬೇಡಿಕೆ ಹೆಚ್ಚಲಿದೆ. ದುರಭ್ಯಾಸಗಳನ್ನು ಬಿಡುವುದು ಅತ್ಯುತ್ತಮ, ಹಿರಿಯರ ಆರೋಗ್ಯದಲ್ಲಿ ಅನಿರೀಕ್ಷಿತವಾಗಿ ವ್ಯತ್ಯಾಸವಾಗುವುದರಿಂದ ದೂರದೂರುಗಳಿಗೆ ಪ್ರಯಾಣಬೇಡ, ನಿರಂತರ ವೈದ್ಯರ ಸಂಪರ್ಕದಲ್ಲಿದ್ದರಂತೂ ಇನ್ನೂ ಉತ್ತಮ. ಜ್ಞಾನಿಗಳ ಸಂದರ್ಶನ ಭಾಗ್ಯ ದೊರೆಯಲಿದ್ದು, ಅಮೂಲ್ಯ ವಸ್ತುಗಳು ಕಣ್ಮರೆಯಾಗುವ ಅಥವಾ ಕಳ್ಳತನವಾಗುವ ಸಂಭವವಿದ್ದು ಅವುಗಳನ್ನು ಜೋಪಾನವಾಗಿರಿಸುವುದು ಲೇಸು. ಮಕ್ಕಳ ಬಹುದಿನದ ಬೇಡಿಕೆಯೆಂಬಂತೆ ಅವರಿಗೆ ವಡವೆ ವಸ್ತ್ರಗಳಿಗೆಂದು ಸ್ವಲ್ಪ ಹೆಚ್ಚೇ ಎನ್ನಬಹುದಾದ ಖರ್ಚು ಅನಿವಾರ್ಯವಾಗಲಿದೆ. ಲಲಿತಾ ಸಹಸ್ರನಾಮ ಪಾರಾಯಣ ಮಾಡಿ. ಬುಧ, ಗುರು, ಶನಿ, ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಅಂದುಕೊಂಡ ಕೆಲಸಗಳನ್ನು ಮಾಡುವತ್ತ ಗಮನಹರಿಸಿ, ಇಲ್ಲವಾದಲ್ಲಿ, ಅವುಗಳು ಮಧ್ಯದಲ್ಲೇ ನಿಂತುಹೋಗಬಹುದು. ಮಕ್ಕಳ ವಿದ್ಯಾಭ್ಯಾಸದಲ್ಲಿ ಸಾಕಷ್ಟು ಪ್ರಗತಿ. ಮತ್ತೊಬ್ಬರನ್ನು ನಂಬಿಯೂ ನಂಬದಂತಿರುವುದು ಬುದ್ಧಿವಂತರ ಲಕ್ಷಣ. ವಿದೇಶದಲ್ಲಿ ನಿಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಲು ನಿಮಗೊಂದು ಸದಾವಕಾಶ ಒದಗಿಬರಲಿದೆ. ನಿಮ್ಮ ಮುಂದಾಲೋಚನೆಯಿಂದಾಗಿ ಭಾರೀ ನಷ್ಟವೊಂದು ತಪ್ಪಲಿದೆ. ಹಣಕಾಸಿನ ಹರಿವು ಉತ್ತಮ, ಅಮೂಲ್ಯ ವಸ್ತ್ರಾಭರಣಗಳ ಖರೀದಿ, ವಿದ್ಯಾರ್ಥಿ ವಿದೇಶಾಧ್ಯಯನಕ್ಕೆ ಸಾಮಾಜಿಕ ನೆರವು ಸಿಗಲಿದೆ. ಆದಾಯದಲ್ಲಿ ಸ್ವಲ್ಪಭಾಗ ಉಳಿತಾಯವಿರಲಿ, ಗುರು-ಹಿರಿಯರ ವಿಶೇಷಾನುಗ್ರಹ ನಿಮಗಿದೆ. ಸಾಕು ಪ್ರಾಣಿಗಳಿಂದ ತೊಂದರೆ. ಸೋಮ, ಬುಧ, ಶನಿ ಶುಭದಿನಗಳು..

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಪಾಲುದಾರರ ನಡುವೆ ತೀವ್ರ ಮಾತಿನ ಚಕಮಕಿ, ಸಣ್ಣ ಕೈಗಾರಿಕೆಗಳಿಗೆ ಸರ್ಕಾರದಿಂದ ಸೌಲಭ್ಯಗಳು, ವಾಹನ ಖರೀದಿಗೆ ಇದು ಸುಸಮಯ, ನಂಬಿದವರಿಂದಾಗಿ ಅರ್ಧಕ್ಕೇ ನಿಂತುಹೋಗಿದ್ದ ಯೋಜನೆಗಳಿಗೆ ಮರುಜೀವ ಬರಲಿದೆ. ಇನ್ನಾದರೂ ಶ್ರದ್ಧೆ ಶ್ರಮವಹಿಸಿ ಯಶಸ್ಸು ಪಡೆಯಲು ಪ್ರಯತ್ನಿಸಿ. ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುವವರು ಮೇಲಾಧಿಕಾರಿಗಳ ಮರ್ಜಿ ಹಿಡಿಯದೆ ಬೇರೆ ದಾರಿಯಿಲ್ಲ. ನೀವಾಡಬಹುದಾದ ಬಿರುನುಡಿಗಳಿಂದ ಹಿರಿಯರ ಮನಸ್ಸಿಗೆ ನೋವಾದೀತು. ಬಡ ವಿದ್ಯಾರ್ಥಿಗಳಿಗೆ ಸಾಧ್ಯವಾದಷ್ಟು ನೆರವಾಗಿ. ಸೋದರಿಯ ಕಷ್ಟಗಳು ನಿಮ್ಮ ಮಾರ್ಗದರ್ಶದಲ್ಲಿ ಪರಿಹಾರವಾಗಲಿವೆ.ಅತಿಯಾದ ಭೋಜನಕೂಟ ಅಷ್ಟು ಒಳ್ಳೆಯದಲ್ಲ. ಗುರು, ಶುಕ್ರ, ಶನಿ, ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ನಿಮ್ಮ ಮಾತಿಗೆ ಎಲ್ಲಿ ಬೆಲೆಯಿರುತ್ತದೆಯೋ ಅವರಿಗೆ ಮಾತ್ರ ಸಲಹೆ, ಸೂಚನೆಗಳನ್ನು ಕೊಡಿ, ಕೆಲಸ, ಕಾರ್ಯಗಳಲ್ಲಿ ತುಸು ಹಿನ್ನಡೆ, ಅಪ್ರತಿಮ ಪ್ರತಿಭಾವಂತರಿಗೆ ದೇಶ-ವಿದೇಶಗಳ ಪ್ರಸಿದ್ಧ ಕಂಪನಿಗಳಿಂದ ಸಲಹೆಗಾರರಾಗಿರುವಂತೆ ವಿಶೇಷಾಹ್ವಾನ, ಸರ್ಕಾರದಿಂದಾಗಬೇಕಾಗಿರುವ ಅತಿ ಮುಖ್ಯ ಕೆಲಸಗಳು ರಾಜಕಾರಣಿಗಳಿಂದಾಗಲಿವೆ. ವಹಿವಾಟಿನಲ್ಲಿ ಕುಸಿದಿದ್ದ ಜಾಹೀರಾತು ಕಂಪನಿಗಳಿಗೆ ಪುನಶ್ಚೇತನ ದೊರೆಯಲಿದೆ. ಕ್ರೀಡಾಪಟುಗಳಿಗೆ ಉತ್ತಮ ತರಬೇತುದಾರರು ದೊರೆಯುವರು, ಗಡಿ ರಕ್ಷಣೆಯಲ್ಲಿ ನಿರತರಾದವರಿಗೆ ಜವಾಬ್ದಾರಿ ಹೆಚ್ಚಲಿದೆ. ವ್ಯಾಪಾರ ವಹಿವಾಟಿಗೆ ಸಂಬಂಧಿಸಿದ ನ್ಯಾಯಾಲಯದ ತೀರ್ಪು ನಿಮ್ಮಂತೆಯಾಗಲಿದೆ, ಹಣಕಾಸಿನ ಹರಿವು ಅತ್ಯುತ್ತಮ. ಎಷ್ಟೇ ಕೆಲಸ, ಕಾರ್ಯಗಳ ಒತ್ತಡವಿದ್ದರೂ ಮಕ್ಕಳ ವಿದ್ಯಾಭ್ಯಾಸದ ಕಡೆ ಸ್ವಲ್ಪ ಗಮನವಿರಲಿ. ಹಿರಿಯರ ಮಾತನ್ನು ಗೌರವಿಸಿ. ಭಾನು, ಸೋಮ, ಗುರು, ಶುಭ ದಿನಗಳು.

**ವಿಶೇಷ ದಿನಗಳು : ದಿನಾಂಕ: 24-6-2021ನೇ ಗುರುವಾರ ಕಾರು ಹುಣ್ಣಿಮೆ, ವಟಸಾವಿತ್ರಿ ಪೂಜೆ**


## ನಾಲ್ಕನೇ ವರ್ಷದ ಪುಣ್ಯಸ್ಮರಣೆ



**ದಿ. ಬಳಗನೂರು ರಾಮನಗೌಡ್ರು**

ಅಕ್ಕಿ ವರ್ತಕರು, ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ ಮತ್ತು ನೀವು ಹಾಕಿ ಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,

**ಪತ್ನಿ : ಶ್ರೀಮತಿ ಕಸ್ತೂರಮ್ಮ ಮತ್ತು ಮಕ್ಕಳು ಹಾಗೂ ಮೊಮ್ಮಕ್ಕಳು**
**ಶ್ರೀ ಅಮರೇಶ್ವರ ಟ್ರೇಡಿಂಗ್ ಕಂಪನಿ, ಅಮರೇಶ್ವರ ಅಂಡ್ ಕೋ**
**ಎಪಿಎಂಸಿ, ನೀರುಳ್ಳಿ ಮಾರ್ಕೆಟ್ ಹತ್ತಿರ, ದಾವಣಗೆರೆ ಹಾಗೂ ಬಂಧು-ಮಿತ್ರರು.**



**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ಧಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು


## ಆನ್‌ಲೈನ್ ತರಗತಿಯನ್ನು ದೂರದರ್ಶನದಲ್ಲಿ ಪ್ರಸಾರ ಮಾಡಿ

**ಓದುಗರ ಪತ್ರ**

ಮಾನ್ಯರೇ,

ಮಕ್ಕಳಿಗೆ ಆನ್‌ಲೈನ್ ತರಗತಿಗಳು ಅರ್ಥವಾಗುತ್ತಿಲ್ಲ. ಆದ್ದರಿಂದ ದಯವಿಟ್ಟು ಚಂದನ ಟಿವಿಯಲ್ಲಿ ತರಗತಿಗಳನ್ನು ಪ್ರಸಾರ ಮಾಡಬೇಕೆಂದು ಶಿಕ್ಷಣ ಸಚಿವರಿಗೆ ಮನವಿ ಮಾಡಿಕೊಳ್ಳುತ್ತೇವೆ. ಮೊಬೈಲ್‌ನಲ್ಲಿ ಮಕ್ಕಳಿಗೆ ಸರಿಯಾಗಿ ಅರ್ಥವಾಗುತ್ತಿಲ್ಲ. ಜೊತೆಗೆ ಕಣ್ಣಿನ ತೊಂದರೆ ಎದುರಾಗುತ್ತಿದೆ. ಕೆಲವೊಮ್ಮೆ ಮಕ್ಕಳು ಪಾಠ ಕೇಳದೆ ಗೇಮ್ ಆಡುವುದಕ್ಕೆ ಮುಂದಾಗುತ್ತಿದ್ದಾರೆ. ದಯವಿಟ್ಟು ಬೇಗನೆ ಶಾಲೆ ಪ್ರಾರಂಭಿಸಿ ಅಥವಾ ಚಂದನ ಟಿವಿಯಲ್ಲಿ ತರಗತಿಗಳನ್ನು ಆರಂಭಿಸಿ ಎನ್ನುವುದು ನಮ್ಮ ಮನವಿ.

**- ಐರಣಿ ಶೆಟ್ರು, ಚಿತ್ರಕಲಾ ಶಿಕ್ಷಕರು, ಹರಿಹರ.**

## ಮಾಸ್ಕ್ : ದಂಡ, 128 ವಾಹನಗಳ ವಶ

ದಾವಣಗೆರೆ, ಜೂ.19- ಜಿಲ್ಲೆಯಲ್ಲಿ ಇಂದು ಮಾಸ್ಕ್ ಧರಿಸದೇ ಓಡಾಡುತ್ತಿದ್ದ 328 ಮಂದಿಯಿಂದ ಒಟ್ಟು 70 ಸಾವಿರ ರೂ. ದಂಡ ಸಂಗ್ರಹಿಸಲಾಗಿದೆ. ಅನಾವಶ್ಯಕವಾಗಿ ರಸ್ತೆಗಿಳಿದ 128 ವಾಹನಗಳನ್ನು ಸೀಜ್ ಮಾಡಲಾಗಿದೆ.

## ಶಿಕ್ಷಕರಿಗೆ ಆಹಾರ ಕಿಟ್ ವಿತರಣೆ



ದಾವಣಗೆರೆ, ಜೂ.19 - ಕೋವಿಡ್-19ನಿಂದ ಸಂಕಷ್ಟಕ್ಕೀಡಾಗಿರುವ ಖಾಸಗಿ ಅನುದಾನ ರಹಿತ ಶಿಕ್ಷಕರಿಗೆ ನಗರದ ಹಿರಿಯ ನ್ಯಾಯವಾದಿ ರೇವಣ್ಣ ಬಳ್ಳಾರಿ ಅವರು 50 ಆಹಾರ ಸಾಮಗ್ರಿಗಳ ಕಿಟ್‌ಗಳನ್ನು ವಿತರಿಸಿದರು.

ಒಬ್ಬ ಶಿಕ್ಷಕ ದೇಶವನ್ನು ಕಟ್ಟುತ್ತಾನೆ. ಅಂತಹ ಶಿಕ್ಷಕ ಇಂದು ಬದುಕುವುದಕ್ಕೂ ತೊಂದರೆ ಅನುಭವಿಸುತ್ತಿರುವುದು ನೋವುಂಟು ಮಾಡುತ್ತದೆ. ಶಿಕ್ಷಕರಿಗೆ ಸ್ವಲ್ಪವಾದರೂ ಸಹಾಯವಾಗಲೆಂದು ಕಿಟ್‌ಗಳನ್ನು ವಿತರಿಸಲಾಗುತ್ತಿದೆ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಜಿ.ಕೆ ಶಕುಂತಲಾ, ಶ್ರೀಮತಿ ಪಂಕಜ, ಕೃಷ್ಣಪ್ಪ, ಶಿವಧನು, ಎನ್. ಜೆ.ಶಿವಕುಮಾರ್, ದವನ್, ಖಾಸಗಿ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಹೆಚ್.ಡಿ. ರಂಗನಾಥ್, ಉಪಾಧ್ಯಕ್ಷ ಶರ್ಮಾ, ಸಂಘಟನಾ ಕಾರ್ಯದರ್ಶಿ ಸಂತೋಷ್, ಗಾಯತ್ರಿ ಉಪಸ್ಥಿತರಿದ್ದರು.

## ಶಿಕ್ಷಣ ಪ್ರೇಮಿ ಪುಟ್ಟಮ್ಮ ಅವರಿಗೆ ಸನ್ಮಾನ



**ಕೋಡಿಯಾಲ**

ರಾಣೇಬೆನ್ನೂರು, ಜೂ.19- ನಿವೃತ್ತ ಮುಖ್ಯ ಇಂಜಿನಿಯರ್ ಗುರುಸಿದ್ಧಪ್ಪ ಚನ್ನಬಸಪ್ಪ ತಲ್ಲೂರು ಅವರ ವತಿಯಿಂದ ಕೊಡಿಯಾಲದ ಶಿಕ್ಷಣ ಪ್ರೇಮಿ ಪುಟ್ಟಮ್ಮ ಹಿರೇಮಠ ಅವರನ್ನು ಸನ್ಮಾನಿಸಿ, 11000 ರೂ. ದೇಣಿಗೆ ನೀಡಲಾಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಿ.ಆರ್.ಬಳ್ಳಾರಿ ಮಾತನಾಡಿ, ಪುಟ್ಟಮ್ಮ ಹಿರೇಮಠರವರ ಶೈಕ್ಷಣಿಕ ಸೇವೆಯನ್ನು ಪ್ರಶಂಸಿಸಿದರು.

ಗ್ರಾ.ಪಂ. ಅಧ್ಯಕ್ಷ ಚೇತನ್ ಪೂಜಾರ್, ಶಾಲೆಯ ಮುಖ್ಯೋಪಾಧ್ಯಾಯ ಮಲ್ಲಿಕಾರ್ಜುನ ಬಾವಿಕಟ್ಟಿ, ಭಾಸ್ಕರ್, ಅಮೋಘ ಬಾದಾಮಿ, ರವಿ ಕರಿಯಪ್ಪ ಹಳ್ಳಳ್ಳಿ, ಸುಜಾತ, ಮಲ್ಲೇಶಪ್ಪ ಮುಟಚಟ್ಟಿ, ಗ್ರಾ.ಪಂ. ಸದಸ್ಯರಾದ ಬಸವಣ್ಣೆಪ್ಪ ಹೆಗ್ಗಪ್ಪನವರ, ಪ್ರಭು ಗುತ್ತೂರು, ಶಾಲೆಯ ಶಿಕ್ಷಕರಾದ ಶಿವಯ್ಯ ಹಿರೇಮಠ, ದೇವರಾಜ ಮಲ್ಲಾಪುರ, ಎಸ್.ರೇಣುಕಮ್ಮ, ಸಿ.ರೇಖಾ ಇದ್ದರು.

## ಜೀಜಾಬಾಯಿ ಸ್ಮರಣೆ : ಆಹಾರ ವಿತರಣೆ



ದಾವಣಗೆರೆ, ಜೂ.19 - ಶ್ರೀ ರಾಜಮಾತ ಜೀಜಾಬಾಯಿಯವರ ಪುಣ್ಯಸ್ಮರಣೆಯ ದಿನದ ಅಂಗವಾಗಿ, ಜೈ ಭವಾನಿ ಜೈ ಶಿವಾಜಿ ಮರಾಠ ಮಹಿಳಾ ಸಂಘದ ವತಿಯಿಂದ ರಸ್ತೆ ಬದಿಯ ಅಲೆಮಾರಿ ಜನಾಂಗಗಳಿಗೆ ಆಹಾರ ವಿತರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಅನಿತಾ ಮಾಲತೇಶ್, ಚೇತನ ಶಿವಕುಮಾರ್, ಭಾಗ್ಯ ಪಿಸಾಳೆ, ಭವಾನಿ ಮಣಿಕಂಠ, ರೇಷ್ಮಾ ಕೆ ರಾವ್, ರೇಣುಕಮ್ಮ, ಕೋಮಲ್ ಹಾಗೂ ಸಂಘದ ಸದಸ್ಯರು ಹಾಜರಿದ್ದರು

## ಹರಿಹರ ತಾಲ್ಲೂಕಿನಲ್ಲಿ 6 ಪಾಸಿಟಿವ್

ಮಲೇಬೆನ್ನೂರು, ಜೂ.19- ತಾಲ್ಲೂಕಿನಲ್ಲಿ ಶನಿವಾರ 622 ಜನರಿಗೆ ಕೋವಿಡ್ ಟೆಸ್ಟ್ ಮಾಡಲಾಗಿದ್ದು, ರ್‍ಯಾಪಿಡ್ ಟೆಸ್ಟ್‌ನಲ್ಲಿ ಹರಿಹರ ನಗರದಲ್ಲಿ ಮೂವರಿಗೆ, ಹೊಳೆಸಿರಿಗೆರೆ, ಮಲೇಬೆನ್ನೂರು, ಬಿಳಸನೂರಿನಲ್ಲಿ ತಲಾ ಒಬ್ಬರಿಗೆ ಸೋಂಕು ದೃಢಪಟ್ಟಿದೆ.

ಹೊಳೆಸಿರಿಗೆ, ಭಾನುವಳ್ಳಿ, ಎಕ್ಕೆಗೊಂದಿ, ಮಲೇಬೆನ್ನೂರಿನಲ್ಲಿ ಮೊಬೈಲ್ ಟೀಮ್ ಟೆಸ್ಟ್‌ಗಳನ್ನು ಮಾಡಿದರೆ, ಹರಿಹರ ನಗರದ ಸಾರ್ವಜನಿಕ ಆಸ್ಪತ್ರೆ, ಮಲೇಬೆನ್ನೂರಿನ ಸಮುದಾಯ ಆರೋಗ್ಯ ಕೇಂದ್ರ ಸೇರಿದಂತೆ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲೂ ಎಂದಿನಂತೆ ಟೆಸ್ಟ್‌ಗಳು ನಡೆದಿವೆ.

**21 ಪ್ರಕರಣಗಳು :** ಶನಿವಾರ ಬೆಳಗಿನ ವರದಿ ಪ್ರಕಾರ ಹರಿಹರ ತಾಲ್ಲೂಕಿನಲ್ಲಿ 21 ಜನರ ಕೋವಿಡ್ ಟೆಸ್ಟ್ ವರದಿ ಪಾಸಿಟಿವ್ ಬಂದಿದೆ.


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 19.06.2021ರಂದು ಅಕಾಲಿಕವಾಗಿ ನಿಧನರಾದ
ಬಾಲಾಜಿ ರೈಸ್‌ಮಿಲ್ ಮಾಲೀಕರೂ ಹಾಗೂ ಆತ್ಮೀಯ ಮಿತ್ರರೂ ಆದ

**ಶ್ರೀ ಎಂ. ವೀರಭದ್ರರಾವ್**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

- ನಲ್ಲೂರು ಅರುಣಾಚಲ
- ವಿ.ಸಿ. ಸವಣೂರು ಚಂದ್ರಶೇಖರಪ್ಪ
- ಆರ್.ಹೆಚ್. ಮೃತ್ಯುಂಜಯಪ್ಪ



॥ ಓಂ ಶ್ರೀ ಸಾಯಿರಾಂ ॥

## ಭಾವಪೂರ್ಣ ಶ್ರದ್ಧಾಂಜಲಿ





ಭಗವಾನ್ ಶ್ರೀ ಸತ್ಯಸಾಯಿ ಬಾಬಾರವರ ಪರಮಭಕ್ತರು, ಈಶ್ವರಮ್ಮ ಟ್ರಸ್ಟ್‌ನ ಮತ್ತು ಶ್ರೀ ಸತ್ಯಸಾಯಿ ವಿದ್ಯಾನಿಕೇತನ ಶಾಲಾ ಆಡಳಿತ ಮಂಡಳಿಯ ಅಧ್ಯಕ್ಷರು ಹಾಗೂ ಈಶ್ವರಮ್ಮ ಶಾಲೆಯ ಹಿರಿಯ ಮಾರ್ಗದರ್ಶಕರೂ, ಬಾಲಾಜಿ ರೈಸ್‌ಮಿಲ್‌ನ ಮಾಲೀಕರು ಹಾಗೂ ಉದಾರಿಗಳೂ ಆಗಿದ್ದ

**ಶ್ರೀ ಎಂ. ವೀರಭದ್ರರಾವ್**

ಅವರು ದಿನಾಂಕ 19.06.2021ರ ಶನಿವಾರ ಮುಂಜಾನೆ 3 ಗಂಟೆಗೆ ಸ್ವಾಮಿಯ ಪಾದಗಳಲ್ಲಿ ಲೀನರಾಗಿರುತ್ತಾರೆ. ಶ್ರೀಯುತರು ಈಶ್ವರಮ್ಮ ಟ್ರಸ್ಟ್‌ಗೂ, ಸತ್ಯ ಸಾಯಿ ಸೇವಾ ಸಮಿತಿಗೂ ಎರಡು ಶಾಲೆಗಳಿಗೂ ಅಪಾರ ಕೊಡುಗೆ ಸಲ್ಲಿಸಿದ್ದಾರೆ. ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸುತ್ತೇವೆ ಮತ್ತು ಭಗವಾನ್ ಬಾಬಾರವರು ಅವರ ಆತ್ಮಕ್ಕೆ ಸದ್ಗತಿಯನ್ನು ಕರುಣಿಸಲೆಂದು ಪ್ರಾರ್ಥಿಸುತ್ತೇವೆ. ಅವರ ಅಗಲುವಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

ಕಾರ್ಯದರ್ಶಿಗಳು ಹಾಗೂ ಪದಾಧಿಕಾರಿಗಳು
ಈಶ್ವರಮ್ಮ ಟ್ರಸ್ಟ್ (ರಿ.)
ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಪದಾಧಿಕಾರಿಗಳು
ಈಶ್ವರಮ್ಮ ಶಾಲಾ ಆಡಳಿತ ಮಂಡಳಿ,
ಪ್ರಾಂಶುಪಾಲರು ಮತ್ತು ಗುರುವೃಂದ
ಈಶ್ವರಮ್ಮ ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆ,
ಶ್ರೀ ಸತ್ಯಸಾಯಿ ವಿದ್ಯಾನಿಕೇತನ ಶಾಲೆ, ಶಾಸ್ತ್ರೀಹಳ್ಳಿ, ದಾವಣಗೆರೆ
ಸಂಚಾಲಕರು ಮತ್ತು ಸದಸ್ಯರು,
ಶ್ರೀ ಸತ್ಯಸಾಯಿ ಸೇವಾ ಸಮಿತಿ, ದಾವಣಗೆರೆ



## ಭಾವಪೂರ್ಣ ಶ್ರದ್ಧಾಂಜಲಿ



ದಾಗಿನಕಟ್ಟೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ
ಮುಖ್ಯಕಾರ್ಯನಿರ್ವಹಣಾಧಿಕಾರಿಯಾಗಿದ್ದ

**ಶ್ರೀ ಜಿ. ವೇದಮೂರ್ತಿ**

ಅವರ ನಿಧನಕ್ಕೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸುತ್ತಾ, ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥನೆ.

**ಜೆ.ಆರ್. ಷಣ್ಮುಖಪ್ಪ**, ಮಾಜಿ ಅಧ್ಯಕ್ಷರು,
ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ದಾವಣಗೆರೆ.



## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 19.06.2021ರಂದು ಅಕಾಲಿಕವಾಗಿ ನಿಧನರಾದ
ಬಾಲಾಜಿ ರೈಸ್‌ಮಿಲ್ ಮಾಲೀಕರೂ ಹಾಗೂ ಆತ್ಮೀಯ ಮಿತ್ರರೂ ಆದ

**ಶ್ರೀ ಎಂ. ವೀರಭದ್ರರಾವ್**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

**ಬಿ. ನರಸಿಂಹರಾವ್ ಮತ್ತು ಬ್ರದರ್ಸ್**
**ಶ್ರೀ ವೆಂಕಟೇಶ್ವರ ಜನರಲ್ ಮರ್ಚಂಟ್ಸ್**
ದಾವಣಗೆರೆ.

**ಕೆ. ಶೇಷಗಿರಿರಾವ್**
**ಶ್ರೀ ವೆಂಕಟಲಕ್ಷ್ಮಿ ಟ್ರೇಡರ್ಸ್**
ಎಪಿಎಂಸಿ ಯಾರ್ಡ್, ದಾವಣಗೆರೆ.

**ಕೆ. ಸೂರ್ಯನಾರಾಯಣ**
**ಶ್ರೀ ವೆಂಕಟರತ್ನ ಜನರಲ್ ಸ್ಟೋರ್ಸ್**
ಚಾಮರಾಜಪೇಟೆ, ದಾವಣಗೆರೆ.

## ಆನ್‌ಲೈನ್ ಯೋಗ ಸ್ಪರ್ಧೆಗೆ ಚಾಲನೆ



ದಾವಣಗೆರೆ, ಜೂ.19- ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಯುಷ್ ಇಲಾಖೆ, ಜಿಲ್ಲಾ ವರದಿಗಾರರ ಕೂಟ, ಜಿಲ್ಲಾ ಯೋಗ ಒಕ್ಕೂಟದ ಆಶ್ರಯದಲ್ಲಿ 7ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಆನ್‌ಲೈನ್ ಮೂಲಕ 8 ವರ್ಷದ ಮೇಲ್ಪಟ್ಟವರಿಗೆ ಯೋಗ ಸ್ಪರ್ಧೆ ಇಂದು ನಡೆಯಿತು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ.ರಿಷ್ಯಂತ್ ವಿಡಿಯೋ ಕಾನ್ಫರೆನ್ಸ್ ಮೂಲಕ ಅಭ್ಯರ್ಥಿಗಳ ಯೋಗ ಸ್ಪರ್ಧೆಗೆ ಚಾಲನೆ ನೀಡಿದರು.

ಜವಳಿ ಮಳಿಗೆ ಉದ್ಯಮಿ ಬಿ.ಸಿ.ಉಮಾಪತಿ, ಜಿಲ್ಲಾ ಯೋಗ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ವಾಸುದೇವ್ ರಾಯ್ಕರ್, ಜಿಲ್ಲಾ ಆಯುಷ್ ಅಧಿಕಾರಿ ಡಾ.ಶಂಕರಗೌಡ, ಆಯುಷ್ ಇಲಾಖೆ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಲಸಿಕೆಗಾಗಿ ಶಾಸಕ ಎಸ್ಸೆಸ್‌ಗೆ ಮನವಿ



ದಾವಣಗೆರೆ, ಜೂ.19 - ನಗರ ಪಾಲಿಕೆಯ 15 ಮತ್ತು 44ನೇ ವಾರ್ಡುಗಳ ಸಾರ್ವಜನಿಕರಿಗೆ ಕೋವಿಡ್ ಲಸಿಕೆ ನೀಡುವಂತೆ ಮಹಾನಗರ ಪಾಲಿಕೆ ಮಾಜಿ ಸದಸ್ಯ ಶಿವನಳ್ಳಿ ಆರ್. ರಮೇಶ್ ಹಾಗೂ 15ನೇ ವಾರ್ಡ್ ನ ಮಹಾನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಆಶಾ ಅವರ ಪತಿ ಉಮೇಶ್ ಅವರ ನೇತೃತ್ವದಲ್ಲಿ ಶಾಸಕ ಶಾಮನೂರು ಶಿವಶಂಕರಪ್ಪ ಅವರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ವಾರ್ಡ್‌ನ ಕಾರ್ಯಕರ್ತರಾದ ಮಂಜುನಾಥ, ಆರ್. ಸಂತೋಷ್, ಪ್ರದೀಪ್, ಹರೀಶ್, ಸಚಿನ್, ಅನಿಲ್, ಪ್ರಸನ್ನ, ಶ್ರೀನಿವಾಸ್, ರಾಘವೇಂದ್ರ, ಸಮಾಜ ಸೇವಕ ಕೆ.ಎಂ. ವೀರಯ್ಯ ಸ್ವಾಮಿ ಇದ್ದರು.

## ಹವಾಮಾನ ಆಧಾರಿತ ಬೆಳೆ ವಿಮೆ ನೋಂದಣಿ ಮಾಡಿಸಲು ಸೂಚನೆ

ದಾವಣಗೆರೆ, ಜೂ.19- ಪ್ರಸಕ್ತ ಸಾಲಿನ ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ (ಆರ್-ಡಬ್ಲ್ಯೂಬಿಸಿಐಎಸ್) ಯಡಿಯಲ್ಲಿ ದಾವಣಗೆರೆ, ಚನ್ನಗಿರಿ, ಹೊನ್ನಾಳಿ, ನ್ಯಾಮತಿ, ಹರಿಹರ ಮತ್ತು ಜಗಳೂರು ತಾಲ್ಲೂಕುಗಳಿಗೆ ತೋಟಗಾರಿಕೆ ಬೆಳೆಗಳಾದ ಅಡಿಕೆ, ದಾಳಿಂಬೆ, ವೀಳ್ಯದೆಲೆ, ಕಾಳುಮೆಣಸು ಹಾಗೂ ಮಾವು ಬೆಳೆಗಳಿಗೆ ಮುಂಗಾರು ಹಂಗಾಮಿನ ಬೆಳೆಗಳ ಸಂಯೋಜನೆಗಳನ್ನು ಅಧಿಸೂಚಿಸಲಾಗಿದ್ದು, ವಿಮೆ ನೋಂದಣಿ ಮಾಡಿಸಲು ಸರ್ಕಾರವು ಆದೇಶ ಹೊರಡಿಸಿದೆ. ಅಡಿಕೆ, ದಾಳಿಂಬೆ, ವೀಳ್ಯದೆಲೆ, ಕಾಳುಮೆಣಸು ಬೆಳೆಗಳ ವಿಮೆ ನೋಂದಣಿಗೆ ಇದೇ ದಿನಾಂಕ 30 ಮತ್ತು ಮಾವು ಬೆಳೆ ವಿಮೆಗೆ ನೋಂದಣಿ ಮಾಡಿಸಲು ಜುಲೈ 31 ಕೊನೆಯ ದಿನಾಂಕವಾಗಿರುತ್ತದೆ ಎಂದು ಜಿ.ಪಂ ತೋಟಗಾರಿಕೆ ಉಪನಿರ್ದೇಶಕರು ತಿಳಿಸಿದ್ದಾರೆ.

## ಎಲ್ಲರೂ ಲಸಿಕೆ ಹಾಕಿಸಿಕೊಳ್ಳಬೇಕು




**ಹರಪನಹಳ್ಳಿ : ಗ್ರಾಮ ಪಂಚಾಯ್ತಿ ಮಾಜಿ ಸದಸ್ಯ ಕೆಂಚನಗೌಡ್ರು ಕರೆ**

ಹರಪನಹಳ್ಳಿ, ಜೂ.19- ಕೊರೊನಾ ಸಾಂಕ್ರಾಮಿಕ ರೋಗವಾಗಿದ್ದು, ಪ್ರತಿಯೊಬ್ಬರು ಲಸಿಕೆ ಹಾಕಿಸಿಕೊಳ್ಳುವ ಮೂಲಕ ಉತ್ತಮ ಆರೋಗ್ಯ ಕಾಪಾಡಿಕೊಳ್ಳಿ ಎಂದು ಗ್ರಾಮ ಪಂಚಾಯ್ತಿ ಮಾಜಿ ಸದಸ್ಯ ಕೆಂಚನಗೌಡ್ರು ಹೇಳಿದರು.

ತಾಲ್ಲೂಕಿನ ಬಾಲೇನಹಳ್ಳಿ ಗ್ರಾಮದಲ್ಲಿ ತಾಲ್ಲೂಕು ಆರೋಗ್ಯ ಇಲಾಖೆ ವತಿಯಿಂದ 45 ವರ್ಷ ಮೇಲ್ಪಟ್ಟ ಸಾರ್ವಜನಿಕರಿಗೆ ಕೋವಿಡ್ ಲಸಿಕೆ ಹಾಕುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಆರೋಗ್ಯ ಇಲಾಖೆಯ ಪ್ರವೀಣ್, ಜಯಮ್ಮ, ಆಶಾ ಕಾರ್ಯಕರ್ತೆ ಶಕುಂತಲಾ, ಪಿ.ಡಿ.ಓ ಶಿವಕುಮಾರನಾಯ್ಕ, ಮುಖಂಡರಾದ ಕೆಂಚಪ್ಪ, ಹನುಮಂತಪ್ಪ, ತಳವಾರ್ ತಿಮ್ಮಪ್ಪ, ಸತ್ತೂರು ಮಂಜುನಾಥ, ಸಣ್ಣ ರೇವಣಪ್ಪ ಇನ್ನಿತರರಿದ್ದರು.

# ಯಡಿಯೂರಪ್ಪ ರಾಜ್ಯಪಾಲರಾಗಲಿದ್ದಾರೆ

## ಆಂಧ್ರಪ್ರದೇಶದ ಮಾಧ್ಯಮಗಳಲ್ಲಿ ಸುದ್ದಿ



ಬೆಂಗಳೂರು, ಜೂ. 19 - ಮುಖ್ಯಮಂತ್ರಿ ಯಡಿಯೂರಪ್ಪ ಅವರು ಆಂಧ್ರಪ್ರದೇಶದ ರಾಜ್ಯಪಾಲರಾಗಿ ನೇಮಕಗೊಳ್ಳಲಿದ್ದಾರಂತೆ. ಆಂಧ್ರಪ್ರದೇಶದ ರಾಷ್ಟ್ರೀಯ ಪತ್ರಿಕೆಗಳು ಮತ್ತು ಸುದ್ದಿವಾಹಿನಿಗಳು ಯಡಿಯೂರಪ್ಪ ಮುಂದಿನ ರಾಜ್ಯಪಾಲ ಎಂದು ಸುದ್ದಿಗಳನ್ನು ಬಿತ್ತರಿಸಿವೆ.

ಆಂಧ್ರಪ್ರದೇಶದ ರಾಜ್ಯಪಾಲರ ಹುದ್ದೆ ಜುಲೈ 23ಕ್ಕೆ ಅಂತ್ಯಗೊಳ್ಳಲಿದೆ. ತೆರವಾಗು ತ್ತಿರುವ ಸ್ಥಾನಕ್ಕೆ ಯಡಿಯೂರಪ್ಪ ನೂತನ ರಾಜ್ಯಪಾಲರಾಗಿ ಅಧಿಕಾರ ಸ್ವೀಕರಿಸಲಿದ್ದಾರೆ ಎಂದು ತಿಳಿಸಿವೆ.

ಜುಲೈ 26, 2021ಕ್ಕೆ ಯಡಿಯೂರಪ್ಪ ನವರು ಅಧಿಕಾರ ವಹಿಸಿಕೊಂಡು ಎರಡು ವರ್ಷ ಪೂರ್ಣಗೊಂಡಿದೆ. ಅವರು ಅಧಿಕಾರ ವಹಿಸಿಕೊಳ್ಳುವ ಮುನ್ನ ವರಿಷ್ಠರ ಜೊತೆ ನಡೆದಿರುವ ಮಾತುಕತೆಯಂತೆ ಅಧಿಕಾರದಿಂದ ಕೆಳಗಿಳಿಯಬೇಕು.

ಇದೇ ಸಮಯದಲ್ಲಿ ಆಂಧ್ರಪ್ರದೇಶದ ರಾಜ್ಯಪಾಲರ ಹುದ್ದೆಯೂ ಕಾಕತಾಳೀಯವೆಂಬಂತೆ ತೆರವಾಗುತ್ತದೆ. ಅಲ್ಲಿನ ಪತ್ರಿಕೆಗಳು ಕರ್ನಾಟಕದಲ್ಲಿ ನಾಯಕತ್ವದ ಪ್ರಶ್ನೆಯನ್ನು ಸೌಹಾರ್ದಯುತವಾಗಿ ಇತ್ಯರ್ಥಗೊಳಿಸುವುದು ವರಿಷ್ಠರ ಯೋಚನೆ ಎಂದು ಮೂಲಗಳು ತಿಳಿಸಿವೆ. ರಾಜ್ಯ ಬಿಜೆಪಿಯ ಉಸ್ತುವಾರಿ ಹೊಣೆ ಹೊತ್ತ ಅರುಣ್ ಸಿಂಗ್ ಮೂರು ದಿನಗಳ ತಮ್ಮ ಕರ್ನಾಟಕ ಭೇಟಿಯನ್ನು ಮುಗಿಸಿ ದಿಲ್ಲಿಗೆ ಮರಳುತ್ತಿದ್ದಂತೆಯೇ ಈ ಸುದ್ದಿ ದಿಲ್ಲಿಯಲ್ಲಿ ಸ್ಫೋಟಗೊಂಡಿದೆ.

## ಮಂಗಳಮುಖಿಯರಿಗೆ ಕಿಟ್ ವಿತರಣೆ



ದಾವಣಗೆರೆ, ಜೂ.19 - ರಾಹುಲ್ ಗಾಂಧಿಯವರ ಹುಟ್ಟು ಹಬ್ಬದ ಪ್ರಯುಕ್ತ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ ನೇತೃತ್ವದಲ್ಲಿ ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಸಿಲುಕಿರುವ ಮಂಗಳಮುಖಿಯರಿಗೆ ದಿನಸಿ ಕಿಟ್‌ಗಳನ್ನು ನೀಡಲಾಯಿತು.

ಈ ಸಂದರ್ಭದಲ್ಲಿ ದಾವಣಗೆರೆ ಉಸ್ತುವಾರಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸವಿತಾ ರಘು, ರಾಜ್ಯ ಕಾರ್ಯದರ್ಶಿ ಇಲಾಹಿ ಸಿಕಂದರ್, ನಗರಸಭೆ ಮಾಜಿ ಅಧ್ಯಕ್ಷ ಡಿ. ಬಸವರಾಜ್, ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಶೆಟ್ಟಿ, ನಗರ ಪಾಲಿಕೆ ಸದಸ್ಯ ಎ. ನಾಗರಾಜ್, ಯುವ ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿನಯ್ ಜೋಗಪ್ಪನವರ್, ಉತ್ತರ ಪ್ರಧಾನ ಕಾರ್ಯದರ್ಶಿ ನವೀನ್ ನಳವಾಡಿ, ದಕ್ಷಿಣ ಪ್ರಧಾನ ಕಾರ್ಯದರ್ಶಿಗಳಾದ ಮಹಬೂಬ್ ಬಾಷಾ, ಮುಬಾರಕ್, ಜಬೀವುಲ್ಲಾ, ಯುವ ಕಾಂಗ್ರೆಸ್ ಸದಸ್ಯರಾದ ತಿಪ್ಪೇಶ್, ಸಾಗರ್ ಸ್ವಾಮಿ ಇನ್ನಿತರರು ಉಪಸ್ಥಿತರಿದ್ದರು.


## ರಾಹುಲ್ ಗಾಂಧಿ ಹುಟ್ಟುಹಬ್ಬ ಬಡ ಕುಟುಂಬಕ್ಕೆ ಆಹಾರ ವಿತರಣೆ



ದಾವಣಗೆರೆ, ಜೂ.19 - ರಾಹುಲ್ ಗಾಂಧಿ ಅವರ ಜನ್ಮ ದಿನದ ಅಂಗವಾಗಿ ದಕ್ಷಿಣ ನಗರ ಘಟಕದ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ನಗರದ ನಿರಾಶ್ರಿತರ ಕೇಂದ್ರಗಳಲ್ಲಿನ ಬಡ ಕುಟುಂಬಗಳಿಗೆ ಆಹಾರ ವಿತರಣೆ ಮಾಡಲಾಯಿತು.

ಯುವ ಕಾಂಗ್ರೆಸ್ ಸಮಿತಿಯ ರಾಷ್ಟ್ರೀಯ ವಕ್ತಾರ ಹೆಚ್. ಜೆ. ಮೈನುದ್ದೀನ್, ಕೆಪಿವೈಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳ ಸವಿತಾ ರಘು, ಕೆಪಿವೈಸಿಸಿ ಕಾರ್ಯದರ್ಶಿ ಇಲಾಹಿ ಸಿಕಂದರ್, ಡಿ.ವೈ.ಸಿ.ಸಿ ಜಿಲ್ಲಾಧ್ಯಕ್ಷ ನಿಖಿಲ್ ಕೊಂಡಜ್ಜಿ, ದಾವಣಗೆರೆ ಯುವ ಕಾಂಗ್ರೆಸ್ ಉಪಾಧ್ಯಕ್ಷ ಸಾಗರ್. ಎಲ್.ಹೆಚ್., ಮಹಮ್ಮದ್ ಸಾಧಿಕ್, ಸದ್ದಾಂ, ಮಹಮ್ಮದ್ ವಾಜಿದ್, ವಿನಯ್ ಜೆ ಎಚ್, ಸೈಯದ್ ಇರ್ಫಾನ್, ಮಹಮ್ಮದ್ ರಫೀಕ್, ರಾಕೇಶ್. ಡಿ.ಸಿ , ಹಬೀಬಾ , ನವೀನ್ ನಲವಾಡಿ. ಮುಬಾರಕ್, ಖಾಜಾ ಮೈನುದ್ದೀನ್, ಜಬೀವುಲ್ಲಾ ಸಮೀರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

# ಜ್ಞಾನ - ಅನ್ನ ದಾಸೋಹಕ್ಕೆ ದಾವಣಗೆರೆ ಅಗ್ರಸ್ಥಾನ



ದಾವಣಗೆರೆ, ಜೂ.19- ದಾವಣಗೆರೆ ದಾನ - ಧರ್ಮಗಳ ತವರೂರು. ಅನ್ನ ದಾಸೋಹ ಮತ್ತು ಜ್ಞಾನ ದಾಸೋಹದಲ್ಲಿ ಅಗ್ರಸ್ಥಾನದಲ್ಲಿದೆ ಎಂದು ಕೂಡಲ ಸಂಗಮದ ವೀರಶೈವ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ಮುಕ್ತ ಕಂಠದಿಂದ ಪ್ರಶಂಸಿಸಿದರು.

ನಗರದ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಕಲ್ಯಾಣ ಮಂಟಪಕ್ಕೆ ಇಂದು ಭೇಟಿ ನೀಡಿದ್ದ ಶ್ರೀಗಳು, ತರಳಬಾಳು ಸೇವಾ ಸಮಿತಿ ಹಾಗೂ ಶಿವಸೈನ್ಯದ ವತಿಯಿಂದ ಕೋವಿಡ್ ಸೋಂಕಿತರು ಹಾಗೂ ವಾರಿಯರ್‌ಗಳಿಗೆ ವಿತರಿಸುವ 'ಶಿವ ಪ್ರಸಾದ' ವ್ಯವಸ್ಥೆಯನ್ನು ಪರಿಶೀಲಿಸಿದ ನಂತರ ತಮ್ಮನ್ನು ಭೇಟಿಯಾದ ಪತ್ರಕರ್ತರೊಂದಿಗೆ ಮಾತನಾಡಿದರು.

ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಮಾರ್ಗದರ್ಶನದಲ್ಲಿ ಕಳೆದ 50 ದಿನಗಳಿಂದ ಈ ನಿರಂತರ ಸೇವೆ ಇನ್ನೂ ಮುಂದುವರೆದಿದ್ದು, ಕೊರೊನಾ ಸಂಕಷ್ಟ ಪರಿಸ್ಥಿತಿಯಲ್ಲಿ ಹಸಿದವರಿಗೆ ಅನ್ನ ನೀಡುವ ಕೈಂಕರ್ಯದಲ್ಲಿ ತೊಡಗಿರುವ ಕಾರ್ಯಕರ್ತರು ಅಭಿನಂದನಾರ್ಹರು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕೋವಿಡ್ ನಿರ್ಮೂಲನೆಯ ಏಕೈಕ ಮಾರ್ಗವೆಂದರೆ ಕೈ ಶುಚಿತ್ವ, ಮಾಸ್ಕ್ ಧರಿಸುವುದು ಮತ್ತು ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು ಎಂದ ಶ್ರೀಗಳು, ಧೈರ್ಯವೇ ಇದಕ್ಕೆ ಮೂಲ ಔಷಧಿಯಾಗಿದೆ. ಭಯವೇ ಕೊರೊನಾ, ಧೈರ್ಯವೇ ವ್ಯಾಕ್ಸಿನ್ ಎಂದರು.

ಇನ್ಮುಂದೆ ಧಾರ್ಮಿಕ ಸಂಸ್ಥೆ ನಿರ್ಮಾಣ ಮಾಡುವ ಸಂದರ್ಭದಲ್ಲಿ ಶಾಲೆ ಮತ್ತು ಆಸ್ಪತ್ರೆ ಕಟ್ಟುವ ಗಟ್ಟಿ ತೀರ್ಮಾನ ಕೈಗೊಳ್ಳಬೇಕಾಗಿದೆ. ಭಾರತಕ್ಕೆ ಶಾಲೆ ಮತ್ತು ಆಸ್ಪತ್ರೆಗಳ ಅವಶ್ಯಕತೆ ಇದೆ ಎಂದರು.

## ಸಿ.ಎಂ. ಬದಲಾವಣೆ ಮಾಡುವುದಾದರೆ ಉತ್ತರ ಕರ್ನಾಟಕಕ್ಕೆ ಆದ್ಯತೆ ಕೊಡಿ

ಒಂದು ವೇಳೆ ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾಯಿಸುವ ಸಂದರ್ಭ ಬಂದರೆ ಉತ್ತರ ಕರ್ನಾಟಕದ ಲಿಂಗಾಯತರಿಗೆ ಆದ್ಯತೆ ಕೊಡಿ ಎಂದು ಶ್ರೀ ಜಯ ಮೃತ್ಯುಂಜಯ ಸ್ವಾಮೀಜಿ ತಮ್ಮ ಇಂಗಿತ ವ್ಯಕ್ತಪಡಿಸಿದರು.

ಉತ್ತರ ಕರ್ನಾಟಕಕ್ಕೆ ಪ್ರಾತಿನಿಧ್ಯತೆ ಸಿಕ್ಕಿಲ್ಲ. ಆದ್ದರಿಂದ ಅಭಿವೃದ್ಧಿ ಬಗ್ಗೆ ಚಿಂತಿಸುವ ಪ್ರಾಮಾಣಿಕ, ಕಳಂಕ ರಹಿತ ಮತ್ತು ಮೋದಿ ಮನಸ್ಸು ಗೆಲ್ಲುವ ವ್ಯಕ್ತಿಗೆ ಮುಖ್ಯಮಂತ್ರಿ ಪಟ್ಟ ಇರಲಿ ಎಂದರು.

ಈ ಸಂದರ್ಭದಲ್ಲಿ ಪ್ರಭು ಕಲ್ಬುರ್ಗಿ, ಕೆ.ಬಿ. ಪರಮೇಶ್ವರಪ್ಪ, ಶಶಿಧರ ಹೆಮ್ಮನಬೇತೂರು, ಮಹಾಂತೇಶ್ ಒಣರೊಟ್ಟಿ, ಮಾಗನೂರು ಉಮೇಶ್ ಗೌಡ್ರು ಮತ್ತಿತರರಿದ್ದರು.

## ಸರ್ಕಾರ ನಿರ್ಧರಿಸದೆ ಶಾಲೆಗಳು ಶುಲ್ಕ ಕೇಳಬಾರದು



ದಾವಣಗೆರೆ, ಜೂ.19 -ಸರ್ಕಾರದ ಶುಲ್ಕ ವಿವರಗಳನ್ನು ಪ್ರಕಟಿಸದೆ ಖಾಸಗಿ ಶಾಲೆಗಳು ಶುಲ್ಕ ವಸೂಲಿಗೆ ಮುಂದಾಗಬಾರದು ಎಂದು ಬಿಜೆಪಿ ಮುಖಂಡ ಎನ್.ಜಿ. ಪುಟ್ಟಸ್ವಾಮಿ ಒತ್ತಾಯಿಸಿದ್ದಾರೆ.

ಶಾಲೆಗಳು ಇನ್ನೂ ಆರಂಭವಾಗಿಲ್ಲ. ಎಲ್ಲಾ ಕಡೆ ಆನ್‌ಲೈನ್ ತರಗತಿಗಳು ನಡೆಯುತ್ತಿವೆ. ಈ ನಡುವೆ ಖಾಸಗಿ ಶಾಲೆಗಳವರು ಶುಲ್ಕ ತುಂಬಲು ಒತ್ತಾಯ ಮಾಡುತ್ತಿದ್ದಾರೆ. ಇಲ್ಲದಿದ್ದರೆ ಆನ್‌ಲೈನ್ ತರಗತಿ ಕಟ್ ಮಾಡುವ ಬೆದರಿಕೆ ಹಾಕುತ್ತಿದ್ದಾರೆ, ಇದು ಸರಿಯಲ್ಲ. ಕೊರೊನಾ ಕಾರಣದಿಂದ ಜನರು ಆರ್ಥಿಕವಾಗಿ ನಲುಗಿ ಹೋಗಿದ್ದಾರೆ. ದುಡಿಮೆ ಇಲ್ಲದೆ ಕಂಗಲಾಗಿದ್ದಾರೆ. ಇಂಥ ಸಮಯದಲ್ಲಿ ಶುಲ್ಕ ವಸೂಲಿಗೆ ಬಲವಂತ ಮಾಡಬಾರದು ಎಂದು ಅವರು ಮನವಿ ಮಾಡಿದ್ದಾರೆ.

ಸರ್ಕಾರ ಇಷ್ಟು ಶುಲ್ಕ ಕಟ್ಟಿ ಎಂದು ನಿರ್ಧರಿಸಿದ ಮೇಲೆ ಪೋಷಕರು ಖಂಡಿತಾ ಕಟ್ಟುತ್ತಾರೆ. ಆದರೆ, ಅಲ್ಲಿಯವರೆಗೂ ಸಹಕರಿಸಬೇಕೆಂದು ಖಾಸಗಿ ಶಾಲೆಯವರನ್ನು ಪುಟ್ಟಸ್ವಾಮಿ ವಿನಂತಿಸಿದ್ದಾರೆ.


## ಜು.1 ರಿಂದ ಶಾಲೆಗಳು ಆರಂಭ

**ತೆಲಂಗಾಣ**

ಹೈದರಾಬಾದ್, ಜೂ. 19 – ತೆಲಂಗಾಣದ ಎಲ್ಲಾ ಶೈಕ್ಷಣಿಕ ಸಂಸ್ಥೆ ಗಳು ಜುಲೈ 1ರಿಂದ ಭೌತಿಕವಾಗಿ ತರಗತಿಗಳನ್ನು ಆರಂಭಿಸಲಿವೆ ಎಂದು ರಾಜ್ಯ ಸರ್ಕಾರ ತಿಳಿಸಿದೆ. ಕೊರೊನಾದ ಎರಡನೇ ಅಲೆ ಕಡಿಮೆಯಾಗುತ್ತಿರುವಂತೆಯೇ ಲಾಕ್‌ಡೌನ್ ಸಂಪೂರ್ಣ ತೆರವುಗೊಳಿಸುವ ವೇಳೆ ಈ ನಿರ್ಧಾರಕ್ಕೆ ಬರಲಾಗಿದೆ. ಎಲ್ಲಾ ಶಿಕ್ಷಣ ಸಂಸ್ಥೆಗಳನ್ನು ಜುಲೈ 1ರಿಂದ ತೆರೆಯಲು ನಿರ್ಧರಿಸಲಾಗಿದೆ. ವಿದ್ಯಾರ್ಥಿಗಳ ಹಾಜರಾತಿಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಪ್ರಕಟಿಸಲು ಶಿಕ್ಷಣ ಇಲಾಖೆಗೆ ಸೂಚನೆ ನೀಡಲಾಗಿದೆ.

ಶುಕ್ರವಾರ ತೆಲಂಗಾಣದಲ್ಲಿ 1,400ರಷ್ಟು ಕೊರೊನಾ ಪ್ರಕರಣಗಳು ಕಂಡು ಬಂದಿದ್ದವು. ಕೊರೊನಾ ಸಾವಿನ ಸಂಖ್ಯೆ 12 ಆಗಿತ್ತು.

## ಲಸಿಕೆ ಕಾರ್ಯ ಸಮರ್ಪಕವಾಗಿದೆ



ದಾವಣಗೆರೆ, ಜೂ.19- ಸುಮಾರು 136 ಕೋಟಿ ಜನಸಂಖ್ಯೆ ಹೊಂದಿರುವ ಭಾರತದಲ್ಲಿ ಅತ್ಯಂತ ಸಮರ್ಪಕವಾಗಿ ವ್ಯಾಕ್ಸಿನೇಷನ್ ಕಾರ್ಯ ನಡೆಯುತ್ತಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.

ನಗರದ ಇಂಡಸ್ಟ್ರೀಯಲ್ ಏರಿಯಾದಲ್ಲಿ ಜಿಲ್ಲಾ ಸಣ್ಣ ಕೈಗಾರಿಕೆಗಳ ಸಂಘದವರು ಕಾರ್ಮಿಕರಿಗೆ ನಿನ್ನೆ ಏರ್ಪಡಿಸಿದ್ದ ಕೋವಿಡ್ ಲಸಿಕೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ದಾವಣಗೆರೆ ಜಿಲ್ಲೆಯಲ್ಲಿ ಈವರೆಗೆ 4 ಲಕ್ಷ ಜನರಿಗೆ ಲಸಿಕೆ ನೀಡಲಾಗಿದೆ. ಜಿಲ್ಲೆಯಲ್ಲಿ 14 ಸಾವಿರ ವಿಕಲಚೇತನರಿಗೆ ಲಸಿಕೆ ನೀಡಲಾಗಿದೆ. ಉಳಿದಂತೆ ರಸ್ತೆ ಬದಿ ವ್ಯಾಪಾರಿಗಳು, ಪೆಟ್ರೋಲ್ ಬಂಕ್ ಕಾರ್ಮಿಕರು, ಗ್ಯಾಸ್ ಸಿಲಿಂಡರ್ ವಿತರಕರು, ನೀರು ಸರಬರಾಜುದಾರರು, ಮಾಧ್ಯಮದವರು ಸೇರಿದಂತೆ 35 ಸಾವಿರ ಜನರಿಗೆ ಲಸಿಕೆಯನ್ನು ಯಶಸ್ವಿಯಾಗಿ ನೀಡಲಾಗಿದೆ ಎಂದರು. ಈ ಸಂದರ್ಭದಲ್ಲಿ ಸಂಘದ ಪದಾಧಿಕಾರಿಗಳಾದ ಶಂಭುಲಿಂಗಪ್ಪ, ಪಿ.ವಿ.ಸಿ ಪ್ರಸಾದ್, ಆನಂದ್, ಎಸ್.ಟಿ. ವೀರೇಶ್, ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್ ಮತ್ತಿತರರಿದ್ದರು.

## 22ರಂದು ನಗರಕ್ಕೆ ಸಚಿವೆ ಶಶಿಕಲಾ ಜೊಲ್ಲೆ

ದಾವಣಗೆರೆ ಜೂ. 19 - ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರಾದ ಶಶಿಕಲಾ ಅ. ಜೊಲ್ಲೆ ಅವರು ಇದೇ ದಿನಾಂಕ 22 ರ ಮಂಗಳವಾರ ನಗರಕ್ಕೆ ಆಗಮಿಸಲಿದ್ದಾರೆ.

ಕನ್ಸಲ್ಟೆನ್ಸಿ ಸರ್ವೀಸಸ್
ನಮ್ಮ ಕಛೇರಿಯಲ್ಲಿ ಬಿಲ್ಡಿಂಗ್ ಪ್ಲ್ಯಾನ್ಸ್, ಎಸ್ಟಿಮೇಷನ್, ಲೇಔಟ್ ಪ್ಲ್ಯಾನ್ಸ್, ಆನ್‌ಲೈನ್ ಅಪ್‌ಲೋಡ್, ಬ್ಲೂ ಪ್ರಿಂಟ್ಸ್ ಮತ್ತು ಪ್ಲಾಟರ್ ಪ್ರಿಂಟ್ಸ್ (A4-A0 ಸೈಜ್)
Civil ಮಾಡಿಕೊಡಲಾಗುತ್ತದೆ. ಸಂಪರ್ಕಿಸಿ:
ಶ್ರೀ ವೀರಭದ್ರೇಶ್ವರ ಕನ್ಸಲ್ಟೆನ್ಸಿ ಸರ್ವೀಸಸ್ VCS
ಪಿ.ಜೆ. ಲಾಡ್ಜ್ ಎದುರು, ಎ.ವಿ.ಕೆ. ಕಾಲೇಜ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
ಮೊ. 99168 73399, 93432 77422, 99161 73399


॥ ಶ್ರೀ ವಾಸವಿ ನಮಃ ॥
ಕರ್ನಾಟಕ ಆರ್ಯವೈಶ್ಯ ಮಹಾಸಭಾ (ರಿ.)
ಶ್ರೀ ವಾಸವೀ ಪೀಠಂ
ನಂ. 57, 11ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003






ದಿನಾಂಕ 20–06–2021ನೇ ಭಾನುವಾರ ನಡೆಯಲಿರುವ
ಪೂಜ್ಯ ಶ್ರೀ ಶ್ರೀ ಶ್ರೀ
ಸಚ್ಚಿದಾನಂದ ಸರಸ್ವತಿಯವರ
ದ್ವಿತೀಯ ಪೀಠಾರೋಹಣ ಮಹೋತ್ಸವಕ್ಕೆ
ಶುಭ ಕೋರುವವರು :
* ವಾಸವಿ ಸೇವಾ ಸಂಘ (ರಿ.)
* ವಾಸವಿ ಯುವಜನ ಸಂಘ (ರಿ.)
* ವೈಕುಂಠ ಸೇವಾ ಟ್ರಸ್ಟ್
* ವಾಸವಿ ಜನ ಸೇವಾ ಸಂಘ
* ವಾಸವಿ ಮಹಿಳಾ ಸಂಘ
* ವಾಸವಿ ಕನ್ನಿಕಾಂಬ ಸಂಘ
* ವಾಸವಿ ಯುವತಿಯರ ಸಂಘ
ಡಿ.ಸಿ.ಎಂ. ಟೌನ್‌ಷಿಪ್, ದಾವಣಗೆರೆ–577 004.
ಪೀಠಾರೋಹಣ ಪ್ರಯುಕ್ತ ದಿನಾಂಕ 20–06–2021ನೇ ಭಾನುವಾರ ಡಿ.ಸಿ.ಎಂ. ಟೌನ್‌ಶಿಪ್‌ನಲ್ಲಿರುವ
ಶ್ರೀ ಕನ್ಯಕಾ ಪರಮೇಶ್ವರಿ ದೇವಿಗೆ
31 ಲೀಟರ್ ಹಾಲಿನ ಅಭಿಷೇಕ, 31 ವಿವಿಧ ಹೂವು ಮತ್ತು ಪತ್ರೆಗಳಿಂದ ವಿಶೇಷ ಅಲಂಕಾರ
31 ಗೋವುಗಳಿಗೆ ಗೋಪೂಜೆ ಹಾಗೂ ಹಾಗೂ ಗೋವಿನ ಆಹಾರ ಸೇವೆ (1 ಲೋಡ್ ಹುಲ್ಲು)
ಕಾರ್ಯಕ್ರಮ ಇರುತ್ತದೆ

# ಕೊರೊನಾದಿಂದ ಉದರಬಾಧೆ ಹಾಗೂ ದೀರ್ಘ ಕಾಲದ ಸಮಸ್ಯೆ (long covid)



ವಿಶ್ವದಾದ್ಯಂತ ಮೂಲೆ ಮೂಲೆಯಲ್ಲಿ ಹರಡಿರುವ ಕೊರೊನಾ, ಜನರಲ್ಲಿ ಸೋಂಕು ಹಾಗೂ ಸಾವಿನ ಆತಂಕವನ್ನು ಸೃಷ್ಟಿಸಿದೆ. ಸೋಂಕು ತಡೆಯಲು, ರೋಗಿಗಳನ್ನು ರಕ್ಷಿಸಲು ಹಾಗೂ ಲಸಿಕೆ ಮೂಲಕ ರಕ್ಷಿಸಲು ಹಲವಾರು ಸಂಶೋಧನೆಗಳು ನಡೆಯುತ್ತಿವೆ. ಆರಂಭದಲ್ಲಿ ಈ ಸೋಂಕು ಉಸಿರಾಟದ ವ್ಯವಸ್ಥೆಯ ಮೇಲಷ್ಟೇ ಪರಿಣಾಮ ಬೀರುತ್ತದೆ ಎಂದು ಭಾವಿಸಲಾಗಿತ್ತು. ಆದರೆ, ನಂತರದಲ್ಲಿ ಈ ಸೋಂಕು ಕರುಳು, ನರ ಮಂಡಲ, ಮೂತ್ರಪಿಂಡ ವ್ಯವಸ್ಥೆ, ಹೃದಯ ನಾಳ ವ್ಯವಸ್ಥೆಗಳ ಮೇಲೂ ಪರಿಣಾಮ ಬೀರುತ್ತದೆ ಎಂಬುದು ನಂತರದಲ್ಲಿ ಕಂಡು ಬಂದಿದೆ.

ಇದುವರೆಗೂ ಲಭ್ಯವಾಗಿರುವ ಮಾಹಿತಿಯ ಪ್ರಕಾರ ಶೇ.53ರಷ್ಟು ಕೊರೊನಾ ಸೋಂಕಿತರಲ್ಲಿ ಜೀರ್ಣಾಂಗ ವ್ಯವಸ್ಥೆಯಲ್ಲಿ ಸಮಸ್ಯೆಯಾಗಿರುವುದು ಕಂಡು ಬಂದಿದೆ. ವಾಂತಿ, ಭೇದಿ, ಉಬ್ಬಳಿಕೆ, ಹಸಿವಾಗದಿರುವುದು, ಆಸಿಡಿಟಿ, ಅಜೀರ್ಣ ಮತ್ತಿತರೆ ಸಮಸ್ಯೆಗಳು ಕೊರೊನಾ ಸೋಂಕಿತರಲ್ಲಿ ಕಂಡು ಬರುತ್ತಿವೆ.

ಕೊರೊನಾ ಟೆಸ್ಟ್‌ನಲ್ಲಿ ಪಾಸಿಟಿವ್ ಬರುವುದಕ್ಕೆ ಮೊದಲೇ ಶೇ.20ರಷ್ಟು ಜನರಲ್ಲಿ ಹೊಟ್ಟೆ ಸಮಸ್ಯೆ ಕಂಡು ಬಂದಿರುತ್ತದೆ. ಇವರಲ್ಲಷ್ಟೇ ಏಕೆ ಹೊಟ್ಟೆ ಸಮಸ್ಯೆ ಕಂಡು ಬರುತ್ತಿದೆ, ಉಳಿದವರಲ್ಲಿ ಏಕೆ ಸಮಸ್ಯೆಯಾಗುತ್ತಿಲ್ಲ ಎಂಬುದು ಇನ್ನೂ ತಿಳಿದಿಲ್ಲ. ಹೊಟ್ಟೆ ಹಾಗೂ ಉಸಿರಾಟದ ಸಮಸ್ಯೆ ಕಂಡು ಬಂದ ಕೊರೊನಾ ಸೋಂಕಿತರಲ್ಲಿ ಉಸಿರಾಟದ ತೀವ್ರ ಸಮಸ್ಯೆ, ವೆಂಟಿಲೇಷನ್ ಅಗತ್ಯ ಹಾಗೂ ಸಾವಿನ ಸಾಧ್ಯತೆ ಕಂಡು ಬರುತ್ತಿದೆ. ಶೇ.26.7ರಷ್ಟು ಕೊರೊನಾ ಸೋಂಕಿತರ ಮಲದಲ್ಲಿ ಕೊರೊನಾ ವೈರಸ್‌ನ ಆರ್‌ಎನ್‌ಎ ಕಂಡು ಬರುತ್ತಿದೆ.

ಗುಣಮುಖರಾದ ರೋಗಿಗಳಲ್ಲಿ 12 ವಾರಕ್ಕೂ ಹೆಚ್ಚು ಕಾಲ ಹೊಟ್ಟೆ ಸಂಬಂಧದ ಸಮಸ್ಯೆಗಳು ಮುಂದುವರೆದಿವೆ. ಹೀಗಾಗಿ ಈ ಸಮಸ್ಯೆಗೆ ಈಗ 'ದೀರ್ಘ ಕೊರೊನಾ' (long covid) ಎಂಬ ಹೆಸರಿಡಲಾಗಿದೆ. ಕೊರೊನಾದ ಮೊದಲ ಅಲೆಯಲ್ಲಿ ಸೋಂಕಿತರಾದ ಹಲವರು, ಈಗಲೂ ಸಹ ಹೊಟ್ಟೆ ಸಂಬಂಧದ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಶೌಚದ ಮೂಲಕ ಕೊರೊನಾ ಹರಡುವುದು ಇನ್ನೂ ದೃಢಪಟ್ಟಿಲ್ಲ. ಆದರೆ, ಇಂತಹ ಸಾಧ್ಯತೆಯನ್ನು ತಳ್ಳಿ ಹಾಕಲಾಗದು. ಈ ರೀತಿ ಹರಡುವುದು ಸಾಬೀತಾದರೆ, ಸೋಂಕು ತಡೆಯಲು ನೀರು ಶುದ್ಧೀಕರಣ, ಸುರಕ್ಷಿತ ಆಹಾರ ಸೇವನೆ, ಶೌಚಾಲಯ ಸ್ವಚ್ಛತೆ ಮತ್ತಿತರೆ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಅಗತ್ಯ ಬರಲಿದೆ.

**ಕೋವಿಡ್‌ನಿಂದ ಉದರ ಬಾಧೆ ಹೇಗೆ?**

ಎಸಿಇ ರಿಸೆಪ್ಟರ್ ಮೂಲಕ ವೈರಸ್ ಕರುಳನ್ನು ಪ್ರವೇಶಿಸುತ್ತದೆ. ಉಸಿರಾಟದ ನಾಳಕ್ಕೆ ಹೋಲಿಸಿದರೆ, ಕರುಳಿನಲ್ಲಿ 100 ಪಟ್ಟು ಹೆಚ್ಚು ರಿಸೆಪ್ಟರ್‌ಗಳಿರುತ್ತವೆ. ವೈರಸ್ ಇಲ್ಲಿ ಅಗಾಧವಾಗಿ ಹೆಚ್ಚುತ್ತದೆ. ಇದು ಕರುಳಿನ ನಾಳಗಳ ನಾಶಕ್ಕೆ ಕಾರಣವಾಗುತ್ತದೆ. ಇದು ನೋವು, ಬೇಧಿ, ಕರುಳಿನ ಸೂಕ್ಷ್ಮಾಣುಗಳ ಬದಲಾವಣೆಗೆ ಕಾರಣವಾಗುತ್ತದೆ.

ಶ್ವಾಸಕೋಶ ಹಾಗೂ ಕರುಳಿನ ಸೋಂಕಿಗೆ ಗುರಿಯಾದ ಇಬ್ಬರಲ್ಲೂ ಉಸಿರಾಟದ ಸಮಸ್ಯೆ, ವೆಂಟಿಲೇಷನ್ ಅಗತ್ಯ ಹೆಚ್ಚಾಗುತ್ತದೆ. ಮಕ್ಕಳಲ್ಲಿ ಸೋಂಕು ತೀವ್ರವಾಗುವುದು ಹಾಗೂ ಬಹು ಅಂಗ ವೈಫಲ್ಯದ ಪ್ರಕರಣಗಳು ಕಂಡು ಬಂದಿವೆ.

**ಎಚ್ಚರಿಕೆಗೆ ಏನು ಮಾಡಬೇಕು?**

ಬೇಧಿ, ವಾಂತಿ, ಹೊಟ್ಟೆ ನೋವಿನ ರೀತಿಯ ಲಕ್ಷಣಗಳು ಕಂಡು ಬಂದಾಕ್ಷಣ ಅದು ಕೊವಿಡ್ ಎಂದಲ್ಲ. ಆದರೆ, ಕೊರೊನಾದ ಸಂದರ್ಭದಲ್ಲಿ ಈ ರೀತಿಯ ಲಕ್ಷಣಗಳ ಬಗ್ಗೆ ದುಪ್ಪಟ್ಟು ಎಚ್ಚರಿಕೆ ವಹಿಸಬೇಕಾದ ಅಗತ್ಯವಿದೆ.

ಕೊರೊನಾ ವ್ಯಾಪಕವಾಗಿ ಹರಡಿದ ಪ್ರದೇಶದಲ್ಲಿದ್ದರೆ, ಸಹ ಅಸ್ವಸ್ಥತೆ ಇದ್ದರೆ, ಹಿರಿ ವಯಸ್ಸಿನವರಾಗಿದ್ದರೆ ಹೆಚ್ಚು ಎಚ್ಚರಿಕೆ ವಹಿಸುವುದು ಬುದ್ಧಿವಂತಿಕೆ, ಸೋಂಕು ಬಂದಾಗ ತ್ವರಿತವಾಗಿ ಆಸ್ಪತ್ರೆಗೆ ತೆರಳುವುದು ಹಾಗೂ ತ್ವರಿತವಾಗಿ ಸೋಂಕು ಪತ್ತೆ ಮಾಡುವುದರಿಂದ, ಕೋವಿಡ್‌ನಿಂದ ಚೇತರಿಕೆ ಉತ್ತಮವಾಗುತ್ತದೆ. ಸೋಂಕಿನಿಂದ ಚೇತರಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚಾಗುವ ಜೊತೆಗೆ, ದೀರ್ಘಾವಧಿಯ ಸಮಸ್ಯೆಗಳೂ ತಪ್ಪುತ್ತವೆ.

ಟೆಸ್ಟ್‌ಗೆ ಒಳಗಾಗುವುದು ಸೂಕ್ತವಾದರೂ, ಆರ್‌ಟಿ - ಪಿಸಿಆರ್ ಪರೀಕ್ಷೆಯ ಸೆನ್ಸಿಟಿವಿಟಿ ಶೇ.70 ಮಾತ್ರ ಎಂಬುದು ಗಮನಾರ್ಹ. ಹೀಗಾಗಿ ಕೊರೊನಾ ಸಮಯದಲ್ಲಿ ಮನೆಯಲ್ಲಿರುವುದು ಮುಖ್ಯ. ಸೋಂಕಿತರಿಗೆ ಪ್ರತ್ಯೇಕ ಬೆಡ್‌ರೂಮ್ ಹಾಗೂ ಸ್ನಾನದ ಕೋಣೆ ಇರಬೇಕು. ನಿಯಮಿತವಾಗಿ ಕೈ ತೊಳೆದುಕೊಳ್ಳಬೇಕು. ಸ್ವಚ್ಛತೆ ಕಾಯ್ದುಕೊಳ್ಳಬೇಕು. ಹೆಚ್ಚು ನೀರು ಕುಡಿಯಬೇಕು. ಆಹಾರ ಪದ್ಧತಿ ಸೂಕ್ತ ರೀತಿಯದ್ದಾಗಿರಬೇಕು.

ರೋಗ ಲಕ್ಷಣಗಳು ಕಂಡು ಬಂದಾಗ, ಮೂತ್ರ ಕೆಂಪಾದಾಗ, ಬಳಲಿಕೆ, ಒಣಗಿದ ಬಾಯಿ, ಬೇಧಿ, ರಕ್ತ - ಕಪ್ಪು ಮಲ ಉಂಟಾದಾಗ ವೈದ್ಯರನ್ನು ತ್ವರಿತವಾಗಿ ಭೇಟಿ ಮಡಾಬೇಕು. ಸುರಕ್ಷತೆ ಹಾಗೂ ಉತ್ತಮ ಆರೋಗ್ಯ ನಿಮ್ಮ ಹಕ್ಕು. ಅಸೌಖ್ಯ ಉಂಟಾದಾಗ ವೈದ್ಯರನ್ನು ಭೇಟಿ ಮಾಡಿ. ಆನ್‌ಲೈನ್ ಸಂಶೋಧನೆ ಮಾಡಿ ನಾವೇ ನಿರ್ಧಾರಕ್ಕೆ ಬರುವುದಕ್ಕಿಂತ ವೈದ್ಯರನ್ನು ಭೇಟಿ ಮಾಡುವುದು ಉತ್ತಮ.

**ದೀರ್ಘ ಕೋವಿಡ್ ಲಕ್ಷಣಗಳು (long covid)**

ಹಲವರು ಕೊರೊನಾದಿಂದ ಚೇತರಿಸಿಕೊಂಡರೂ, ಹೊಟ್ಟೆ ನೋವು, ರುಚಿ ಹೀನತೆ, ಎದೆ ಉರಿ, ಬಾಯಿ ವ್ರಣ, ಬಳಲುವಿಕೆ, ಪದೇ ಪದೇ ಬೇಧಿ, ನೀರು ಬೇಧಿ, ತೂಕ ಇಳಿಕೆಯಂತಹ ಸಮಸ್ಯೆಗಳನ್ನು ಎದುರಿಸುತ್ತಾರೆ. ರೋಗಿಗಳಿಗೆ ಮೊದಲೇ ಇಂತಹ ಸಮಸ್ಯೆ ಇದ್ದರೆ ಅದು ಕೊವಿಡ್ ನಂತರ ಉಲ್ಬಣಿಸಬಹುದು.

**ಉದರ ಬಾಧೆಗೆ ಇತರೆ ಕಾರಣಗಳು**

ಕೊರೊನಾ ಚಿಕಿತ್ಸೆಗೆ ನೀಡಲಾಗುವ ಸ್ಟಿರಾಯ್ಡ್, ಆಂಟಿ - ವೈರಲ್ ಡ್ರಗ್, ಇಮ್ಯುನ್ ಮಾಡುಲೇಟರ್ ಇತ್ಯಾದಿಗಳು ಉದರ ಬಾಧೆ ತರಬಹುದು. ಸೋಂಕು ಮಂದವಾಗಿ ಈ ರೀತಿಯ ರೋಗ ತರಬಹುದು. ಕೆಲವೊಮ್ಮೆ ದೀರ್ಘ ಕಾಲ ಆಸ್ಪತ್ರೆಗೆ ದಾಖಲಾಗುವುದು, ಆತ್ಮೀಯರನ್ನು ಕಳೆದುಕೊಳ್ಳುವುದು, ಹ ಣಕಾಸು ಸಮಸ್ಯೆ ಇತ್ಯಾದಿಗಳೂ ಸಹ ಮಾನಸಿಕ ಒತ್ತಡ ತಂದು ಉದರ ಬಾಧೆಗೆ ಕಾರಣವಾಗಬಹುದು.

**ದೀರ್ಘ ಕಾಲದ ಕೊರೊನಾ ಲಕ್ಷಣಗಳಿಗೆ ಏನು ಮಾಡಬೇಕು?**

ಪ್ರಸಕ್ತ ಈ ಲಕ್ಷಣಗಳನ್ನು ಟೆಸ್ಟ್‌ಗಳ ಮೂಲಕ ಪತ್ತೆ ಮಾಡಲು ಇಲ್ಲವೇ ಕಾರಣಗಳನ್ನು ವಿಶ್ಲೇಷಿಸಲು ಸ್ಪಷ್ಟ ನಿರ್ಧರಿತ ಮಾನದಂಡಗಳಿಲ್ಲ. ದೀರ್ಘ ಕೋವಿಡ್ ಲಕ್ಷಣಗಳಿಗೆ ರೋಗಿಗಳು ಸ್ವಯಂ ಚಿಕಿತ್ಸೆಗೆ ಮುಂದಾಗಬಾರದು. ಉದರ ಬಾಧೆಯನ್ನು ಕಡೆಗಣಿಸುವುದು, ಇಲ್ಲವೇ ತಡವಾಗಿ ವೈದ್ಯರ ಬಳಿ ಬರುವುದು ಹೆಚ್ಚು ಅಪಾಯಕ್ಕೆ ಕಾರಣವಾಗುವುದು ಕಂಡು ಬಂದಿದೆ.

ವೈದ್ಯರ ಜೊತೆ ನಿರಂತರವಾಗಿ ಸಂಪರ್ಕದಲ್ಲಿದ್ದು ಅವರ ಸಲಹೆಯನ್ನು ಪಾಲಿಸಬೇಕು. ಬಹಳಷ್ಟು ಪ್ರಕರಣಗಳಲ್ಲಿ ಲಕ್ಷಣಗಳನ್ನು ಆಧರಿಸಿ ಚಿಕಿತ್ಸೆ ನೀಡಲಾಗುತ್ತದೆ. ಇಂತಹ ಸಂದರ್ಭದಲ್ಲಿ ಮನಸ್ಸಿಗೆ ಮುದ ನೀಡುವ ಚಟುವಟಿಕೆಗಳಲ್ಲಿ ಹೆಚ್ಚು ತೊಡಗಿಕೊಳ್ಳುವುದು ಉತ್ತಮ. ಕಾಲ್ನಡಿಗೆ, ಸಣ್ಣ ಜಾಗಿಂಗ್, ಸೈಕ್ಲಿಂಗ್, ಅಡುಗೆ ಮಾಡುವುದು, ಕೈ ತೋಟ, ಓದು ಇತ್ಯಾದಿ ಚಟುವಟಿಕೆಗಳು ಉತ್ತಮ. ಸುರಕ್ಷಿತ ರೀತಿಯಲ್ಲಿ ಸ್ನೇಹಿತರ ಜೊತೆ ಮಾತುಕತೆ, ಸಾಮಾಜಿಕವಾಗಿ ಬೆರೆಯುವುದು ಸಹಕಾರಿ. ಅತಿಯಾದ ಚಿಂತೆ ಹಾಗೂ ಅಸಹಾಯಕತೆಗೆ ಗುರಿಯಾಗಿದ್ದರೆ ಆಪ್ತಸಮಾಲೋಚಕರ ಜೊತೆ ಸಮಾಲೋಚನೆ ನಡೆಸಬೇಕು.

**ಸಂಕ್ಷಿಪ್ತವಾಗಿ ಹೇಳುವುದಾದರೆ**

ವೈರಸ್‌ನ ಮೂಲ ಇನ್ನೂ ಪತ್ತೆಯಾಗಿಲ್ಲ. ಯಾವುದೇ ಒಂದು ಟೆಸ್ಟ್ ರೋಗವನ್ನು ಶೇ.100ರಷ್ಟು ನಿಖರವಾಗಿ ಪತ್ತೆ ಮಾಡುತ್ತಿಲ್ಲ. ಲಸಿಕೆಯು ಶೇ.100ರಷ್ಟು ಪರಿಣಾಮಕಾರಿಯಲ್ಲ. ಲಸಿಕೆ ಇಲ್ಲವೇ ಸಹಜವಾಗಿ ಬರುವ ಸೋಂಕು ತರುವ ಆಂಟಿಬಡಿ ಶಾಶ್ವತಲ್ಲ. ಚಿಕಿತ್ಸೆಗೆ ಬಳಸುವ ಹಲವಾರು ಔಷಧಗಳು ರೋಗ ನಿವಾರಣೆಯ ಲಾಭ ತರುವುದು ಸ್ಪಷ್ಟವಾಗಿ ಸಾಬೀತಾಗಿಲ್ಲ. ಹೀಗಾಗಿ ವೈದ್ಯರ ಸಲಹೆ ಪಾಲಿಸುವುದು ಮತ್ತು ಧೃತಿಗೆಡದೆ ಆಶಾಭಾವನೆಯೊಂದೇ ಪವಾಡ ಸದೃಶವಾಗಿ ಚಿಕಿತ್ಸೆ ನೀಡುವ ಔಷಧಿಯಾಗಿದೆ. ಆಶಾವಾದಿಗಳಾಗಿ, ಉತ್ತಮ ನಾಳೆಯ ನಿರೀಕ್ಷೆಯಲ್ಲಿರಿ.



- ಡಾ. ಕೆ.ಎನ್. ಅರವಿಂದ
ಸರ್ಜಿಕಲ್ ಗ್ಯಾಸ್ಟ್ರೋಎಂಟರಾಲಜಿಸ್ಟ್,
ಶಿವಕೃಪ ಗ್ಯಾಸ್ಟ್ರೋಕೇರ್ ಅಂಡ್ ಎಂಡೋಸ್ಕೋಪಿ ಸೆಂಟರ್,
ಪಿ.ಜೆ. ಬಡಾವಣೆ, ದಾವಣಗೆರೆ.
ಮೊ : 90192 06569

advt




# ವಾಸವಿ ಗುರು ಪೀಠಂನ ದ್ವಿತೀಯ ಗುರುಗಳಾದ
# ಪರಮಪೂಜ್ಯ ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಸರಸ್ವತಿ ಮಹಾಸ್ವಾಮಿಗಳವರ
# ಪೀಠಾರೋಹಣ ಮಹೋತ್ಸವ



ಇಂದು ಬೆಂಗಳೂರಿನಲ್ಲಿ ನಡೆಯುತ್ತಿರುವ
ವಿಶ್ವ ಆರ್ಯವೈಶ್ಯ ಸಮುದಾಯದ ಆಧ್ಯಾತ್ಮಿಕ ಹಾಗೂ ಧಾರ್ಮಿಕ ಶಕ್ತಿ ಕೇಂದ್ರವಾದ
**ಶ್ರೀ ವಾಸವಿ ಪೀಠಂ** ದ್ವಿತೀಯ ಪೀಠಾಧಿಪತಿಗಳಾದ
**ಪೂಜ್ಯ ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿಯವರ**
ಪೀಠಾರೋಹಣ ಸಮಾರಂಭದ ಯಶಸ್ಸಿಗೆ ಮಾತೆ ಶ್ರೀ ಕನ್ನಿಕಾಪರಮೇಶ್ವರಿ ಅಮ್ಮನವರಲ್ಲಿ ಭಕ್ತಿಪೂರ್ವಕ ಪ್ರಾರ್ಥನೆ.
ಗೌರವಾನ್ವಿತ ಪೂಜ್ಯ ಪೀಠಾಧಿಪತಿಗಳ ದಿವ್ಯ ಮಾರ್ಗದರ್ಶನದಲ್ಲಿ ಆರ್ಯವೈಶ್ಯ ಸಮುದಾಯವು
ಸರ್ವತೋಮುಖ ಅಭಿವೃದ್ಧಿ ಸಾಧಿಸಲಿ ಮತ್ತು ಅವರ ಕೃಪಾಶೀರ್ವಾದ ಸರ್ವರಿಗೂ ದೊರೆಯಲಿ ಎಂದು ಆಶಿಸುವ,



ಶ್ರೀ ಆರ್.ಪಿ. ರವಿಶಂಕರ್
ಅಧ್ಯಕ್ಷರು,
ಕರ್ನಾಟಕ ಆರ್ಯವೈಶ್ಯ
ಮಹಾಸಭಾ.



ಶ್ರೀ ಆರ್.ಜಿ. ನಾಗೇಂದ್ರಪ್ರಕಾಶ್
ಅಧ್ಯಕ್ಷರು,
ದಾವಣಗೆರೆ ಜಿಲ್ಲಾ ಸಮಿತಿ,
ಕರ್ನಾಟಕ ಆರ್ಯವೈಶ್ಯ
ಮಹಾಸಭಾ.



ಶ್ರೀ ಆರ್.ಎಲ್. ಪ್ರಭಾಕರ
ಕಾರ್ಯದರ್ಶಿ
ಕರ್ನಾಟಕ ಆರ್ಯವೈಶ್ಯ
ಮಹಾಸಭಾ.
ಅಧ್ಯಕ್ಷರು,
ಶ್ರೀ ಕನ್ಯಕಾಪರಮೇಶ್ವರಿ
ದೇವಸ್ಥಾನ ಸಂಘ (ರಿ.)

## ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ ಸಂಘ (ರಿ.)

ಎಸ್.ಕೆ.ಪಿ. ದೇವಸ್ಥಾನ ರಸ್ತೆ, ದಾವಣಗೆರೆ.

**ಆಜೀವ ಗೌರವಾಧ್ಯಕ್ಷರುಗಳು :** ವೈಶ್ಯರತ್ನ ಶ್ರೀ ಸಿ.ಆರ್. ವಿರೂಪಾಕ್ಷಪ್ಪ, ವೈಶ್ಯ ಭೂಷಣ ಶ್ರೀ ಎ.ಬಿ. ವಿಶ್ವನಾಥ ಶ್ರೇಷ್ಠಿ, ವೈಶ್ಯ ಭೂಷಣ ಶ್ರೀ ಆರ್.ಎಸ್. ನಾರಾಯಣ ಸ್ವಾಮಿ, ವೈಶ್ಯ ಭೂಷಣ ಶ್ರೀ ಆರ್.ಜಿ. ನಾಗೇಂದ್ರ ಪ್ರಕಾಶ್

| ಅಧ್ಯಕ್ಷರು : | ಕಾರ್ಯಾಧ್ಯಕ್ಷರು : | ಕಾರ್ಯದರ್ಶಿ : | ಸಹ ಕಾರ್ಯದರ್ಶಿ : | ಖಜಾಂಚಿ : |
|---|---|---|---|---|
| ಶ್ರೀ ಆರ್.ಎಲ್. ಪ್ರಭಾಕರ | ಶ್ರೀ ಕಾಸಲ್ ಎಸ್. ಸತೀಶ್, | ಶ್ರೀ ಜೆ. ರವೀಂದ್ರ ಗುಪ್ತ | ಶ್ರೀ ಎ.ಎಸ್. ಸತ್ಯನಾರಾಯಣ ಸ್ವಾಮಿ | ಶ್ರೀ ತಾತಾ ವೆಂಕಟಾಚಲಪತಿ ಶ್ರೇಷ್ಠಿ |

**ನಿರ್ದೇಶಕರು :**

| | | | | |
|---|---|---|---|---|
| ಶ್ರೀ ಎನ್. ಕಾಶೀನಾಥ್ | ಶ್ರೀ ಶಿವಾನಂದ ಬಿ.ಎಸ್. | ಶ್ರೀ ಎಂ. ನಾಗರಾಜ್ ಗುಪ್ತ, | ಶ್ರೀ ಕೆ.ಎನ್. ಅನಂತರಾಮ ಶ್ರೇಷ್ಠಿ | ಶ್ರೀಆರ್. ಜಿ. ಶ್ರೀನಿವಾಸ ಮೂರ್ತಿ |
| ಶ್ರೀ ಶ್ರೀಧರ್ ಬಾಬು ಕೆ.ಆರ್. | ಶ್ರೀ ಅಜ್ಜಯ್ಯ ಕುಮಾರ್ ಬಿ.ಎಂ. | ವೈಶ್ಯ ಸೇವಾ ಭೂಷಣ ಶ್ರೀ ಪಿ. ರಾಜಗುಪ್ತ | ಶ್ರೀ ಬಿ.ಪಿ. ನಾಗಭೂಷಣ್ | ಶ್ರೀ ಕಾಸಲ್ ವಿ. ಮಂಜುನಾಥ್ |
| ಶ್ರೀ ಭಾನುವಳ್ಳಿ ಆದಿನಾರಾಯಣ ಶ್ರೇಷ್ಠಿ | ಶ್ರೀ ಎಸ್.ಹೆಚ್. ರಮೇಶ್ | ಶ್ರೀ ಎನ್. ಶ್ಯಾಮಸುಂದರ್ | ಶ್ರೀ ಪಿ. ಎಸ್. ಪುಟ್ಟು ಶ್ರೀನಿವಾಸ್ | ಶ್ರೀ ಮಂಜುನಾಥ್ ಪಿ. ಗುಂಡಾಲ್ |
| ಶ್ರೀ ಎಂ. ಎಸ್. ಸತ್ಯನಾರಾಯಣ ಶ್ರೇಷ್ಠಿ | ಶ್ರೀ ಶ್ರೀನಿವಾಸ ಶ್ರೇಷ್ಠಿ ವೈ.ಎಲ್. | ಶ್ರೀ ವೈ. ನಟರಾಜ್ ಶೆಟ್ಟಿ | ಶ್ರೀ ಟಿ. ವಿಜಯ್ ಕುಮಾರ್ | ಶ್ರೀ ಡಾ|| ಪಿ. ರಾಮಚಂದ್ರ ಶೆಟ್ಟಿ |
| ಶ್ರೀ ಸುರೇಶ್ ಶ್ರೇಷ್ಠಿ ಬಿ. | ಶ್ರೀ ಎಸ್.ಹೆಚ್. ಮಲ್ಲೇಶ್ ಶ್ರೇಷ್ಠಿ | ಶ್ರೀ ಎಲ್. ವಿ. ನಾಗಾನಂದ್ | ಶ್ರೀ ವೆಂಕಟಾಚಲಪತಿ | ಶ್ರೀ ಡಾ|| ಕೆ.ಸುರೇಶ್ ಮೂರ್ತಿ ನಯನ. |
| ಶ್ರೀ ಎ.ಎಸ್. ರಘುನಂದನ್ | ಶ್ರೀ ಎಂ.ಕೆ. ನಾಗೇಂದ್ರ ಕುಮಾರ್ | ಶ್ರೀ ಆರ್.ಎ. ನಾಗಭೂಷಣ್ | ಶ್ರೀ ಎ.ಎನ್. ಕೃಷ್ಣಮೂರ್ತಿ | |

## ವಾಸವಿ ಯುವಜನ ಸಂಘ (ರಿ.)




ಅಧ್ಯಕ್ಷರು :
ಆರ್.ಎನ್. ಅಜಿತ್

ಗೌರವ ಅಧ್ಯಕ್ಷರು : ಬಿ. ಎಸ್ ಶಿವಾನಂದ
ನಿಕಟಪೂರ್ವ ಅಧ್ಯಕ್ಷರು : ಬಿ.ಎನ್. ಸಾಯಿಪ್ರಸಾದ್

**ಕಾರ್ಯಕಾರಿ ಸಮಿತಿ ಸದಸ್ಯರುಗಳು ಹಾಗೂ ನಿರ್ದೇಶಕರು :**

| | | | | | |
|---|---|---|---|---|---|
| * ಕಾಸಲ್ ಎಸ್. ದರ್ಶನ್ | * ಎನ್.ವಿ. ಬದರಿನಾಥ್ | * ಅಮರಾವತಿ ಡಿ. ರಾಘವೇಂದ್ರ | * ಟಿ.ಕೆ. ಜಯಂತ್ | * ಜಿ.ಎಸ್. ಸುಬ್ರಹ್ಮಣ್ಯ | * ಎಸ್. ಸುನಿಲ್ |
| * ಪಿ.ಎಸ್. ಅಮೃತ್ | * ವಿನಯ್ ಎ.ವಿ. | * ಕೆ.ಎ. ಸೂರಜ್ | * ಆರ್.ಎಸ್. ಶ್ರೀಕರ್ ಪುನೀತ್ | * ಆರ್. ಎನ್. ನಿತಿನ್ | * ಎಂ.ಎಸ್. ಜೈರಾಮ್ ಗಣೇಶ್ |
| * ಕಾಸಲ್ ಎಸ್. ರತನ್‌ಕುಮಾರ್ | * ಎಂ. ನಾಗಪ್ರಕಾಶ್ | * ಬಿ.ಎಸ್. ರಾಘವೇಂದ್ರ | * ಎಸ್.ಆರ್. ಹರ್ಷ | * ಡಾ|| ಬಿ.ಎನ್. ಅಭಿಷೇಕ್ | * ಕೆ.ಆರ್. ಆದಿತ್ಯಾ |
| * ಟಿ.ಹೆಚ್. ಅಚ್ಚುತಾನಂದ ಗುಪ್ತ | * ಡಿ.ಕೆ. ಪ್ರಮಥ್ | * ಎಸ್. ಸತೀಶ್ | * ಧನುಷ್ ಬಳ್ಳಾರಿ | * ಎಸ್.ಪಿ. ಪುನೀತ್ | * ಟಿ.ಹೆಚ್.ಶಶಿಧರ್ |
| * ಕೆ.ಎಂ. ಪೃಥ್ವಿಕೃಷ್ಣ | * ಪಿ.ಆರ್. ತಿಲಕ್ | * ಎಸ್.ಆರ್. ವಿಶ್ವನಾಥ್ | * ಕೆ.ಎನ್. ಶ್ರೀನಿಧಿ | * ಎ.ಎಸ್. ಅಶ್ವಿನ್ | * ರವಿಚಂದ್ರ |
| * ಎಂ. ಶ್ರೀಕಾಂತ್ | * ಎಂ.ವಿ. ಗಿರೀಶ್ | * ಬಿ.ಎನ್. ಪ್ರದೀಪ್ | * ಕೆ.ಕೆ. ದರ್ಶನ್ | * ಆರ್.ಎಸ್. ಸುಂದರ್ | * ಆರ್.ಆರ್. ಜೀವನ್ |
| * ಎಸ್. ಆರ್. ಸೂರಜ್ | * ಸಿ.ಎಸ್. ಅರ್ಜುನ್ | * ಬಿ.ಎಸ್. ಸೂರಜ್ | * ಎಂ. ರಾಘವೇಂದ್ರ ಗುಪ್ತ | * ರಘುಪ್ರಸಾದ್ | * ಬಿ. ಅಮರ್‌ನಾಥ್ |
| | | * ಜೆ. ಜಿ. ಆದಿತ್ಯಾ | | | |

## ಶ್ರೀ ವಾಸವಿ ಮಹಿಳಾ ಸಂಘ (ರಿ)



ಅಜೀವ ಗೌ|| ಅಧ್ಯಕ್ಷಿಣಿ :
ಶ್ರೀಮತಿ ಡಾ|| ನಾಗಮ್ಮ
ಕೇಶವಮೂರ್ತಿ

ಅಧ್ಯಕ್ಷಿಣಿ : ಶ್ರೀಮತಿ ರಮಾ ನಾಗರಾಜ್
ಗೌರವ ಅಧ್ಯಕ್ಷರು : ಶ್ರೀಮತಿ ಸುಜಾತ ಕೃಷ್ಣ * ಶ್ರೀಮತಿ ಉಷಾ ರಂಗನಾಥ್
* ಶ್ರೀಮತಿ ಹೇಮ ಶ್ರೀನಿವಾಸ್

**ಕಾರ್ಯಕಾರಿ ಸಮಿತಿ ಸದಸ್ಯರುಗಳು ಹಾಗೂ ನಿರ್ದೇಶಕರು :**

| | | |
|---|---|---|
| * ಶ್ರೀಮತಿ ಉಮಾ ಎಸ್. ಮೂರ್ತಿ | * ಶ್ರೀಮತಿ ಸುಧಾ ನಾಗರಾಜ್ | * ಶ್ರೀಮತಿ ಗಾಯತ್ರಿ ಜಗನ್ನಾಥ್ |
| * ಶ್ರೀಮತಿ ಗೀತಾ ಬದ್ರಿನಾಥ್ | * ಶ್ರೀಮತಿ ಶಾಂತ ಕೇಶವಮೂರ್ತಿ | * ಶ್ರೀಮತಿ ಪ್ರಭಾ ರವೀಂದ್ರ |
| * ಶ್ರೀಮತಿ ವನಿತಾ ವಸಂತಕುಮಾರ್ | * ಶ್ರೀಮತಿ ಸುಲೋಚನಾ ಮೋಹನ್ | * ಶ್ರೀಮತಿ ಸೂರ್ಯಪ್ರಭಾ |
| * ಶ್ರೀಮತಿ ಸುನೀತಾ ವೀರನಾರಾಯಣ | * ಶ್ರೀಮತಿ ಮಮತಾ ಶ್ರೀಧರ್ | * ಶ್ರೀಮತಿ ಸರಸ್ವತಿ ಸುಬ್ರಹ್ಮಣ್ಯ |
| * ಶ್ರೀಮತಿ ಮೀರಾ ಮಧುಸೂದನ್ | * ಶ್ರೀಮತಿ ಶಿವರತ್ನ | * ಶ್ರೀಮತಿ ಭಾಗ್ಯಲಕ್ಷ್ಮಿ ಗುಂಡಾಲ್ |
| * ಶ್ರೀಮತಿ ಕುಮಾರಿ ನಾಗೇಶ್ವರ ರಾವ್ | * ಶ್ರೀಮತಿ ಸಂಧ್ಯಾ ಶಿವರಾಮ್ | * ಶ್ರೀಮತಿ ಗೀತಾ ರಾಮ್ |

## ವಾಸವಿ ಯುವತಿಯರ ಸಂಘ

ಅಧ್ಯಕ್ಷಿಣಿ : ಶ್ರೀಮತಿ ಸುಷ್ಮಾ ವೇಣುಗೋಪಾಲ್

**ಕಾರ್ಯಕಾರಿ ಸಮಿತಿ ಸದಸ್ಯರುಗಳು ಹಾಗೂ ನಿರ್ದೇಶಕರು :**

| | |
|---|---|
| ಶ್ರೀಮತಿ ಗೀತಾ ಪ್ರಸಾದ್ | |
| ಶ್ರೀಮತಿ ವೀಣಾ ಭೀಮಾನಂದ್ | ಶ್ರೀಮತಿ ಅಶ್ವಿನಿ ವಿಜಯ್ |
| ಶ್ರೀಮತಿ ನಾಗಶ್ರೀ ಗಿರೀಶ್ | ಶ್ರೀಮತಿ ಸ್ನೇಹ ವಿನಯ್ |
| ಶ್ರೀಮತಿ ಪದ್ಮಾ ಅರುಣ್ | ಶ್ರೀಮತಿ ಮಹಿತಾ ಅಜ್ಜಂಪುರ |
| ಶ್ರೀಮತಿ ಅನಿತಾ ಬ್ಯಾಡಗಿ | ಶ್ರೀಮತಿ ನಂದಿನಿ |
| ಶ್ರೀಮತಿ ಮೀರಾ ರಾಘವೇಂದ್ರ | ಶ್ರೀಮತಿ ಸೌಮ್ಯ ಪುನೀತ್ |
| ಶ್ರೀಮತಿ ಕವಿತಾ ಕೃಷ್ಣಮೂರ್ತಿ | ಶ್ರೀಮತಿ ಕವಿತಾ ಅರ್ಜುನ್ |

## ಶ್ರೀ ವಾಸವಿ ಭಜನಾ ಮಂಡಳಿ



ಅಧ್ಯಕ್ಷರು :
ಶ್ರೀಮತಿ ಜೆ.ಜಿ. ರಾಧ ಗೋಪಾಲಕೃಷ್ಣ

**ಕಾರ್ಯಕಾರಿ ಸಮಿತಿ ಸದಸ್ಯರುಗಳು ಹಾಗೂ ನಿರ್ದೇಶಕರು :**

| | | | | |
|---|---|---|---|---|
| * ಶ್ರೀಮತಿ ಶಾರದಾ ರಾಜಗುಪ್ತ | * ಶ್ರೀಮತಿ ಕವಿತ ಕೃಷ್ಣಮೂರ್ತಿ | * ಶ್ರೀಮತಿ ಗೀತಾ ಯಲ್ಲಪ್ಪ | * ಶ್ರೀಮತಿ ಭಾನುಮತಿ ಹುಚ್ಚರಾಯಪ್ಪ | * ಶ್ರೀಮತಿ ಮಂಗಳ ನಾಗರಾಜ್ |
| * ಶ್ರೀಮತಿ ಲಕ್ಷ್ಮೀ ಕಾಶೀನಾಥ್ | * ಶ್ರೀಮತಿ ಅರ್ಚನ ಸುನೀಲ್ | * ಶ್ರೀಮತಿ ಜಯಲಕ್ಷ್ಮಿ ಮಾಲತೇಶ್ | * ಶ್ರೀಮತಿ ಎನ್ ರೇಣುಕಾ | * ಶ್ರೀಮತಿ ವಾಣಿ ಸತೀಶ್ |
| * ಶ್ರೀಮತಿ ಗೀತಾ ಸರ್ವೋತ್ತಮ | * ಶ್ರೀಮತಿ ಸುನೀತ ಸತೀಶ್ | * ಶ್ರೀಮತಿ ಸಂಧ್ಯಾ ಸೂರ್ಯನಾರಾಯಣ | * ಶ್ರೀಮತಿ ಲಲಿತ ಸುರೇಶ | * ಶ್ರೀಮತಿ ಸುಭದ್ರ ರಾಜ್ |
| * ಶ್ರೀಮತಿ ಲತಾ ವೀರಣ್ಣ | * ಶ್ರೀಮತಿ ಸುಕನ್ಯ ಪ್ರಾಣೇಶ್ | * ಶ್ರೀಮತಿ ಲಕ್ಷ್ಮೀ ಸತೀಶ | * ಶ್ರೀಮತಿ ಸುಜಾತ ವಿಜಯಕುಮಾರ | * ಶ್ರೀಮತಿ ಶಾರದ ಮೇಲಗಿರಿ |
| * ಶ್ರೀಮತಿ ರಾಧ ಕೃಷ್ಣಮೂರ್ತಿ | * ಶ್ರೀಮತಿ ಸರೋಜ ನಾಗರಾಜ್ | | * ಶ್ರೀಮತಿ ಗೀತಾ ಪ್ರಹ್ಲಾದ | |

## ಶ್ರೀ ವಾಸವಿ ಕಿಶೋರ ಸಂಘ



ಅಧ್ಯಕ್ಷರು :
ಕಿರಣ್ ಎಸ್.

ಗೌರವ ಅಧ್ಯಕ್ಷರು :
ನಂದೀಶ್, ಕುಮಾರ್ ಜಿ.ಹೆಚ್.

**ಕಾರ್ಯಕಾರಿ ಸಮಿತಿ ಸದಸ್ಯರುಗಳು ಹಾಗೂ ನಿರ್ದೇಶಕರು :**

| | | | | |
|---|---|---|---|---|
| * ಮಂಜುನಾಥ್ ಎನ್ | * ಸಚಿನ್ ಹೆಚ್. | * ಮಾರುತಿ ಈ. | * ಬಾಲಾಜಿ ಎನ್. | * ಮಂಜುನಾಥ ವಿ. |
| * ನಾಗಭೂಷಣ್ ಎ. | * ಸೂರ್ಯದತ್ತ | * ಹರೀಶ್ ಜಿ.ಎನ್. | * ಅಂಜಿನಿ ಎನ್. | * ಶ್ರೀನಿವಾಸ್ ಈ. |
| * ವರುಣ ಪಿ.ಎನ್. | * ರಾಘವೇಂದ್ರ | * ರಂಜಿತ್ ವಿ.ಪಿ. | * ರಾಹುಲ್ ಜಿ. | * ವೆಂಕಟೇಶ್ ಎನ್. |
| * ಯೋಗೇಶ ಎ.ಎಸ್. | * ಕಾರ್ತಿಕ ಪಿ.ಕೆ. | * ವೆಂಕಟೇಶ್ ಎನ್. | * ಸಂದೀಪ್ ಸಿ.ವಿ. | |
| * ಶ್ರೀಧರ ವಿ. | * ಸುಭಾಷ್ ಎಸ್. | * ಹರೀಶ್ ಸಿ.ಈ. | * ರಾಘವೇಂದ್ರ ಎನ್. | |

## ಶ್ರೀ ಕನ್ನಿಕಾಪರಮೇಶ್ವರಿ ಕೋ- ಆಪ್. ಬ್ಯಾಂಕ್ ಲಿ.,

ಪ್ರಧಾನ ಕಛೇರಿ : ನಂ. 165/1-2, ಶ್ರೀ ವಾಸವಿ ರಸ್ತೆ, 3ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ.



**ಅಧ್ಯಕ್ಷರು :** ಆರ್. ಜಿ. ಶ್ರೀನಿವಾಸಮೂರ್ತಿ
**ಉಪಾಧ್ಯಕ್ಷರು :** ಶ್ರೀಮತಿ ಆರ್.ಎನ್. ಸುಜಾತ

**ನಿರ್ದೇಶಕರುಗಳು :**

| | | |
|---|---|---|
| ಆರ್. ಎಲ್. ಪ್ರಭಾಕರ | ಕಾಸಲ್ ಎಸ್. ಸತೀಶ್ | ಎನ್. ಕಾಶೀನಾಥ್ |
| ಕೆ.ಎನ್. ಅನಂತರಾಮ ಶೆಟ್ಟಿ | ಎ.ಎಸ್. ಸತ್ಯನಾರಾಯಣ ಸ್ವಾಮಿ | ಕಾಸಲ್ ವಿ. ಮಂಜುನಾಥ್ |
| ಜೆ. ರವೀಂದ್ರ ಗುಪ್ತ | ಬಿ.ಎಸ್. ಶಿವಾನಂದ | ವೈ.ಬಿ. ಸತೀಶ್ |
| ಬಿ.ಎಸ್. ರಾಘವೇಂದ್ರ | ಶ್ರೀಮತಿ ಕೆ.ಎಂ. ಗೀತಾ ರಾಮ್ | ಜಿ. ಶ್ರೀಧರ್ |
| ಆರ್. ನಾಗರಾಜ ಶೆಟ್ಟಿ | | |

ಪ್ರಧಾನ ವ್ಯವಸ್ಥಾಪಕರು : ಪಡಗಲ್ ಪ್ರಶಾಂತ್
ಸಹಾಯಕ ಪ್ರಧಾನ ವ್ಯವಸ್ಥಾಪಕರು : ಭೀಮಾನಂದ ಶೆಟ್ಟಿ

## ಶ್ರೀ ಕನ್ನಿಕಾಪರಮೇಶ್ವರಿ ದೇವಸ್ಥಾನ ಡೈಮಂಡ್ ಜ್ಯೂಬ್ಲಿ ವಿದ್ಯಾಪೀಠ (ರಿ.)

2ನೇ ಮೇನ್, 2ನೇ ಕ್ರಾಸ್, ಪಿ.ಜೆ. ಬಡಾವಣೆ, ದಾವಣಗೆರೆ.



| | | |
|---|---|---|
| ಗೌರವಾಧ್ಯಕ್ಷರು : ಸಿ.ಆರ್. ವಿರೂಪಾಕ್ಷಪ್ಪ | ಉಪಾಧ್ಯಕ್ಷರು : ಆರ್.ಎಸ್. ನಾರಾಯಣಸ್ವಾಮಿ | ಉಪಾಧ್ಯಕ್ಷರು : ಆರ್. ಎಲ್. ಪ್ರಭಾಕರ |
| ಕಾರ್ಯದರ್ಶಿ : ಕೆ.ಎನ್. ಅನಂತರಾಮ ಶೆಟ್ಟಿ | ಜಂಟಿ ಕಾರ್ಯದರ್ಶಿ : ಆರ್.ಜಿ. ಶ್ರೀನಿವಾಸಮೂರ್ತಿ | ಖಜಾಂಚಿ : ಕಾಸಲ್ ಎಸ್. ಸತೀಶ್ |
| ಪ್ಲಾನಿಂಗ್ ಸೆಕ್ರೇಟರಿ : ನಾಗರಾಜ್ ವಿ. ಕಾಸಲ್ | ಮ್ಯಾನೇಜಿಂಗ್ ಟ್ರಸ್ಟಿ : ಬಿ.ಎನ್. ಮಂಜುನಾಥ್ | ಮ್ಯಾನೇಜಿಂಗ್ ಟ್ರಸ್ಟಿ : ಜೆ. ವಿ. ಗೋಪಾಲಕೃಷ್ಣ |

ಹಾಗೂ ಎಲ್ಲಾ ಟ್ರಸ್ಟಿಗಳು

**ನಮ್ಮ ಸಂಸ್ಥೆಯ ಶಾಲಾ-ಕಾಲೇಜುಗಳು**

ಬ್ಯಾಡಗಿ ಶೆಟ್ರು ವಿರೂಪಾಕ್ಷಪ್ಪ ಜಯಲಕ್ಷ್ಮಮ್ಮ ಇಂಗ್ಲೀಷ್ ನರ್ಸರಿ ಮತ್ತು ಹೈಯರ್ ಪ್ರೈಮರಿ ಸ್ಕೂಲ್ (ಬಿ.ಎಸ್.ವಿ.ಜೆ.)
ಶ್ರೀಮತಿ ಚನ್ನಗಿರಿ ವನಜಾಕ್ಷಮ್ಮ ವಿರೂಪಾಕ್ಷಪ್ಪ ಹೈಯರ್ ಪ್ರೈಮರಿ ಸ್ಕೂಲ್ (ಸಿ.ವಿ.ವಿ.)
ಶ್ರೀಮತಿ ಚನ್ನಗಿರಿ ರಾಧಮ್ಮ ರಂಗಪ್ಪ ನರ್ಸರಿ ಶಾಲೆ (ಸಿ.ಆರ್.ಆರ್.)
ಶ್ರೀಮತಿ ಕಾಂತಲಕ್ಷ್ಮಮ್ಮ ಜೆ.ಎನ್. ವೆಂಕಟಾಚಲಪತಿ ಶೆಟ್ಟಿ ಇಂಗ್ಲೀಷ್ ಮೀಡಿಯಂ ಹೈಸ್ಕೂಲ್ (ಕೆ.ವಿ.ಎಸ್.)
ರಾಜನಹಳ್ಳಿ ವಿ. ಗೋಪಾಲಕೃಷ್ಣಶೆಟ್ಟಿ ಕಾಂತಲಕ್ಷ್ಮಮ್ಮ ಕನ್ನಡ ಮಾಧ್ಯಮ ಪ್ರೌಢ ಶಾಲೆ (ಆರ್.ವಿ.ಜಿ.ಕೆ.)
ಶ್ರೀ ಅಜ್ಜಂಪುರ ಗೋವಿಂದಸ್ವಾಮಿ ಭಾಗ್ಯಲಕ್ಷ್ಮಮ್ಮ ಸಂಯುಕ್ತ ಪದವಿ ಪೂರ್ವ ಕಾಲೇಜು (ಎಸ್.ಎ.ಜಿ.ಬಿ. ಪಿ.ಯು.ಸಿ)
ಶ್ರೀ ಅಜ್ಜಂಪುರ ಗೋವಿಂದಸ್ವಾಮಿ ಭಾಗ್ಯಲಕ್ಷ್ಮಮ್ಮ ಪ್ರಥಮ ದರ್ಜೆ ಕಾಲೇಜು (ಎ.ಜಿ.ಬಿ.ಪ್ರ.ದ.ಕಾ)
ಶ್ರೀ ವಾಸವಿ ಇಂಗ್ಲೀಷ್ ಮೀಡಿಯಂ ನರ್ಸರಿ ಮತ್ತು ಪ್ರೈಮರಿ ಸ್ಕೂಲ್

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte